ಶ್ರೀರಾಮಚಂದ್ರಾಯನಮಃ

# ರಾ ಮಾ ಯ ಣ

(ಒಂದು ವಿಮರ್ಶೆ)



ಸಂಗ್ರಹ – ನಿರೂಪಣೆ
ಪ್ರೊ॥ ಪಂ ॥ ಬದರೀನಾಥಾಚಾರ್ಯ ಘೂಳೀ ಎಂ.ಎ.

ಮಾಧವ ಮಧ್ವ ಪ್ರಕಾಶನ
ಬೆಂಗಳೂರು–೫೬೦ ೦೯೮
೨೦೦೭

Pageset By
**Sri Raghavendra Enterprises**
Banashankari I Stage, Bangalore-560 050
Phone 080-22421294

ಶ್ರೀಹರಿಃ ಓಂ
ಶ್ರೀರಾಮಚಂದ್ರಾಯನಮಃ

# ರಾ ಮಾ ಯ ಣ

**(ಒಂದು ವಿಮರ್ಶೆ)**

**ಜಯುತ್ಯ ಜೋಽಕ್ಷೀಣ ಸುಖಾತ್ಮ ಬಿಂಬಃ ।**
**ಸ್ವೈಲಶ್ವರ್ಯಕಾಂತಿ ಪ್ರತತಃ ಸದೋದಿತಃ ।**
**ಸ್ವಭಕ್ತ ಸಂತಾಪ ದುರಿಷ್ಟ ಹಂತಾ ।**
**ರಾಮಾವತಾರೋಹರಿರೀಶ ಚಂದ್ರಮಾಃ ॥**
(ಮ.ಭಾ.ತಾ.ನಿ. ೩–೨)

**ಶ್ರೀ ನಾರಾಯಣ ಪಂಡಿತಾಚಾರ್ಯರ ಸಂಗ್ರಹ ರಾಮಾಯಣ ಕಾವ್ಯಕ್ಕೆ ಪ್ರಥಮ ಮಂಗಳಶ್ಲೋಕ.**

**ಭೂಷಾರತ್ನಂ ಭುವನ ವಲಯಶ್ಚಾಖಿಲಾಶ್ಚರ್ಯರತ್ನಂ**
**ಲೀಲಾರತ್ನಂ ಜಲಧಿದುಹಿತುಃ ದೇವತಾಮೌಲಿರತ್ನಂ ।**
**ಚಿಂತಾರತ್ನಂ ಜಗತಿ ಭಜತಾಂ ಸತ್ಸರೋಜದ್ಯುರತ್ನಂ**
**ಕೌಶಲ್ಯಾಯಾಃ ಲಸತು ಮಮ ಹೃನ್ಮಂಡಲೇ ಪುತ್ರರತ್ನಂ ॥**

**ವಂದೇ ವಂದ್ಯಂ ವಿಧಿ ಶಿವ ಮಹೇಂದ್ರಾದಿ ವೃಂದಾರಕೇಂದ್ರೈಃ**
**ವ್ಯಕ್ತಂ ವ್ಯಾಪ್ತಂ ಸ್ವಗುಣಗಣತೋ ದೇಶತಃ ಕಾಲತಶ್ಚ**
**ವಂದ್ಯಂ ಸುಖ ಚಿತಿಮಯ್ಯೈಃ ಮಂಗಳೈರ್ಯುಕ್ತಮಾಂಗ್ಯೈಃ**
**ಸಾನಾಥ್ಯನೋವಗಯುದಧದಕಂ ಬ್ರಹ್ಮ ನಾರಾಯಣಾಖ್ಯಂ ॥**

**ರಾಮಾಯ ರಾಮಭದ್ರಾಯ ರಾಮಚಂದ್ರಾಯ ವೇಧಸೇ ।**
**ರಘುನಾಥಾಯ ನಾಥಾಯ ಸೀತಾಯಃ ಪತಯೇ ನಮಃ॥**

**ನಮೋ ಧರ್ಮಾಯ ಮಹತೇ ವಿಶ್ವಕಲ್ಯಾಣಧಾರಿಣೇ ।**
**ನಮಃ ಸತ್ಯಾಯ ಶಾಂತಾಯ ಶ್ರೀ ರಾಮಾಯ ನಮೋನಮಃ ॥**

**ಪ್ರಥಮೋ ಹನುಮನ್ನಾಮ ದ್ವಿತೀಯೋ ಭೀಮ ಏವ ಚ ।**
**ಪೂರ್ಣಪ್ರಜ್ಞ ಸ್ತೃತೀಯಸ್ತು ಭಗವತ್ಕಾರ್ಯ ಸಾಧಕಃ ॥**

**ಅವತಾರಿಕಾ :** ಲೋಕದಲ್ಲಿ ಅನಾದಿಕಾಲದಿಂದಲೂ ಎರಡು ಪ್ರಮುಖ ಮಹಾಕಾವ್ಯಗಳಾದ ಶ್ರೀ ಮನ್ಮಹಾಭಾರತ ಮತ್ತು ಶ್ರೀಮದ್ರಾಮಾಯಣ



ಚಿರನೂತನವಾಗಿರುವುದು. ಆ ಮಹಾ ಕಾವ್ಯಗಳಿಂದ ಪ್ರಭಾವಿತರಾದವರನ್ನು ಇಂದಿಗೂ ಕಾಣಬಹುದು. ಅವುಗಳಲ್ಲಿನ ಪಾತ್ರಗಳು ಇವತ್ತಿಗೂ ಆದರ್ಶವಾಗಿ– ತಮ್ಮ ಮಗ ಮಗಳಿಗೆ ಈ ಕಾವ್ಯದಲ್ಲಿ ಇರುವ ಹೆಸರುಗಳನ್ನು ಇಡುತ್ತಾರೆ.

ತತ್ರಾಪಿ ಶ್ರೀಮದ್ರಾಮಾಯಣದಲ್ಲಿನ ಮುಖ್ಯ ಪಾತ್ರಗಳೆನಿಸಿದ ಶ್ರೀರಾಮ ಸೀತೆ ಲಕ್ಷ್ಮಣ ಭರತ ಹನುಮಂತ ಇತ್ಯಾದಿ ಮಹನೀಯರು ಭಾರತದಲ್ಲಿ ಚಿರನೂತನವಾಗಿರುತ್ತಾರೆ. ರಾಮಾಯಣದಿಂದ ಪ್ರಭಾವಿತರಾದ ಅನೇಕ ಕವಿಗಳು ಹುಟ್ಟಿಕೊಂಡಿರುತ್ತಾರೆ. ನಮ್ಮ ಜನಾಂಗದ ಮೇಲೆ ಇದರ ಪ್ರಭಾವ ಗಾಢವಾಗಿ ತುಂಬಿಕೊಂಡಿದೆ. ರಾಮಾಯಣದ ಹಲವು ಕಥೆಗಳನ್ನು ಸನ್ನಿವೇಶಗಳನ್ನೂ ನಾಟಕ–ಯಕ್ಷಗಾನ ಬೈಲಾಟದ ಮೂಲಕ ಆದರ್ಶಗಳು ಪ್ರತಿಬಿಂಬಿಸಿರುತ್ತವೆ. ಜಗತ್ತಿನಲ್ಲಿ ಯಾವುದೇ ಗ್ರಂಥಾಲಯದಲ್ಲಾಗಲೀ–ರಾಮಾಯಣದ ಪ್ರತಿ ಇರುಲೇಬೇಕು. ಅಲ್ಲದೇ ಈ ಕೃತಿಯ ಬಗ್ಗೆ ಸಾಕಷ್ಟು ಅರ್ಥ ವ್ಯಾಖ್ಯಾನಗಳು ನೋಡಿದರೆ, ಬೇರೆ ಯಾವ ಕೃತಿಗೂ ಇಷ್ಟು ರೀತಿಯ ವ್ಯಾಖ್ಯಾನಗಳು ಇರುವುದಿಲ್ಲ. ಭಾರತದಲ್ಲಿ ಎಲ್ಲಾ ಭಾಷೆಗಳಲ್ಲಿ ಕಾಣಬಹುದು. ಕೆಲ ವ್ಯಾಖ್ಯಾನಕಾರರು ತಮಗೆ ತಿಳಿದ–ತೋಚಿದ ರೀತಿಯಲ್ಲಿ ರಾಮಾಯಣವನ್ನು ತಿಳಿಸುವ ಪರಿ ನೋಡಿದರೆ ಆಶ್ಚರ್ಯವಾಗುತ್ತದೆ. ಸಂಸ್ಕೃತ ಭಾಷೆಯಲ್ಲದೇ ಅನೇಕ ಭಾಷೆಗಳಲ್ಲಿ–ನಾಟಕ ಇತ್ಯಾದಿಯಾಗಿ ವಿಫುಲವಾಗಿ ಲೆಕ್ಕವಿಲ್ಲದಷ್ಟು ಕಾಣಬಹುದು. ಇದನ್ನು ಮನಗಂಡು **ಗದುಗಿನ ನಾರಾಯಣಪ್ಪ**(ಕುಮಾರವ್ಯಾಸ)**ತಿಣುಕಿದನು ಫಣಿರಾಯ ರಾಮಾಯಣದ ಕವಿಗಳ ಭಾರದಲಿ** ಎಂದು ಹೇಳಿದ್ದು ಸಹಜವೇ ಆಗಿದೆ.

ಹೀಗೆ ವರ್ಷಾನುಗಟ್ಟಲೇ ಏಕೆ ಯುಗಗಳೇ ಕಳೆದಿವೆ. ಆದರೆ ರಾಮಾಯಣದ ಮಹತ್ತು ಆದರ್ಶಗಳೂ ಇಂದಿಗೂ ಮಾಸಿಲ್ಲ–ಮಾಸುವುದೂ ಇಲ್ಲ. (ರಾಮಾಯಣ ಕಾವ್ಯ ರಾಮಾವತಾರ ವೈವಸ್ವತಮನ್ವಂತರ ೨೩ನೇ ತ್ರೇತಾಯುಗದಲ್ಲಿ ನಡೆದಿದೆ ಎಂಬುದು ಮಹತ್ವ.)

ಒಬ್ಬ ಸಂಸ್ಕೃತ ಕವಿ ಒಂದು ಕಡೆ ಹೀಗೆ ಹೇಳಿದ್ದಾನೆ. **ಅಪಿ ಕುಣ್ವನ್ ಪೂರ್ವೈರಿತಿ ಜಿಹತಿ ರಾಮಸ್ಯ ಚರಿತಯಾ.** ಈಗಿನ ಕವಿಗಳು ಹೀಗೆ ಅಂದಿದ್ದಾರೆ – ಹಿಂದಿನ ಅನೇಕ ಕವಿಗಳು ನಡೆದು ಬಂದ ದಾರಿ ಸವೆದು ಹೋಗಿದೆ. ಆದ್ದರಿಂದ ಅವರು ರಾಮಾಯಣ ಕಥೆ ಮಾರ್ಗವನ್ನು ಬಿಟ್ಟು ಮತ್ತೊಂದು ದಾರಿಯಲ್ಲಿ ನಡೆದಿದ್ದಾರೆ ಅಂತ. ಇಲ್ಲಿ ಮುಖ್ಯವಾಗಿ ಒಂದು ವಿಷಯ ತಿಳಿಯಬೇಕು – ಮುಂದಿನ ಕವಿಗಳು ರಾಮಾಯಣದಿಂದ ಪ್ರಭಾವಿತರಾದರೇ ಆಗಲಿ ವಾಲ್ಮೀಕಿಯನ್ನು ಅನುಸರಿಸಲಿಲ್ಲ. ಕೆಲವು ಕಡೆ ವಾಲ್ಮೀಕಿ ವಿವರಿಸಿದ ಪಾತ್ರಗಳು ಮತ್ತು ರಾಮನು ನಡೆದ ರೀತಿ ಸರಿಯಾಗಿಲ್ಲ ಅಂತ, ಅವರಿಗೆ ತೋಚಿ ಟೀಕೆಗಳಿಂದ ಹೊಸ ಪಾತ್ರಗಳನ್ನೂ ಸೃಷ್ಟಿಸಿದರು.

ಮರ್ಯಾದಾರಾಮನಲ್ಲಿ ಹೊಸತರಹದ ಆದರ್ಶಗಳನ್ನು ತುಂಬಿದರು. ಇನ್ನು ಕೆಲಮಹನೀಯರು ರಾಮಾಯಣದ ದುಷ್ಟ ಪಾತ್ರಗಳನ್ನು ಸಜ್ಜನರಾಗಿಸಿದರು. ದುಷ್ಟರಲ್ಲಿ ಸಜಜನಿಕೆ ಕಂಡರು.ಎಲ್ಲಿಗೆ ಬಂತು ರಾಮಾಯಣದ ಅವಾಂತರ. ಅಂದಮೇಲೆ ಕುಮಾರವ್ಯಾಸನು ಸರಿಯಾಗಿಯೇ ನುಡಿದಿದ್ದಾನೆ. ಇಂತಹ ಅಪೂರ್ವ ವಿಚಿತ್ರ ಟೀಕೆಗಳನ್ನು ಬರೆದರು. ಇದೇ ಶತಮಾನದಲ್ಲಿ ರಾಷ್ಟ್ರಕವಿಗಳೆಂದಿನಿಸಿಕೊಂಡವರು ರಾಮಾಯಣದರ್ಶನಂನಲ್ಲಿ ಹೊಸ ತಿರುವು ಪಾತ್ರಗಳನ್ನು ತೋರಿಸುತ್ತಾ ವಾಲ್ಮೀಕಿಗಿಂತ ತಮ್ಮ ಕೃತಿಯೇ ಸರಿ ಎಂಬುದನ್ನು ಬರೆದರು. ಹೀಗಾಗಿ ವಾಲ್ಮೀಕಿಯ ಹೃದಯ ಎಂಥದು ಏನು ಹೇಳಿದ ನಿಜಸ್ವರೂಪವನ್ನು ಅವನ ಮಾತಿನಲ್ಲೇ ತಿಳಿಯುವಂಥಾ ನಿರ್ವ್ಯಾಜ್ಯವನ್ನು ತಿಳಿಯಲು ಸಾಕಷ್ಟು ಶೋಧಿಸಿ ನಿರೂಪಿಸಲು ಈ ಪ್ರಯತ್ನ.

ರಾಮಾಯಣದಲ್ಲಿ ಮುಖ್ಯಮೂಲಪುರುಷ ಶ್ರೀರಾಮಚಂದ್ರನೇ. ಲಕ್ಷ್ಮಣ ಭರತ ಶತೃಘ್ನ ಪೋಷಕವರ್ಗ. ಸೀತಾದೇವಿಯು ರಾಮನ ಪ್ರತಿಬಿಂಬ. ಶ್ರೀ ರಾಮನು ಸಾಕ್ಷಾತ್ ಶ್ರೀಮನ್ನಾರಾಯಣನ ಅವತಾರ. ಸೀತಾದೇವಿ ಲಕ್ಷ್ಮೀದೇವಿ. **ರಾಶಬ್ದೋ ವಿಶ್ವವಚನೋ ಮಾಶ್ಚಾಪೀಶ್ವರ ವಾಚಕಃ । ವಿಶ್ವಾನಾಮೀಶ್ವರೋ ಯೋ ಹೀ ತೇನ ರಾಮಃ ಪ್ರಕೀರ್ತಿತಃ (ಬ್ರಹ್ಮ ವೈವರ್ತ)** ರಾಮಚಂದ್ರ ಸೂರ್ಯನಾದರೆ ಸೀತಾದೇವಿ ಸೂರ್ಯನ ಪ್ರತಿಭೆ. ಇದನ್ನು **''ಅನನ್ಯಾ ರಾಘವೇಣಾಹಂ ಭಾಸ್ಕರೇಣ ಪ್ರಭಾ ಯಥಾ''** ಎಂಬುದಾಗಿ ಸೀತೆ ಹೇಳಿಕೊಂಡಿದ್ದಾಳೆ (ಸುಂ.ಕಾಂ.–೨೧–೧೬). ಅದೇ ರೀತಿಯಾಗಿ ಶ್ರೀರಾಮಚಂದ್ರನೂ ಸಹ ಯುದ್ಧಕಾಂಡದಲ್ಲಿ(೧೨೧–೧೬) **''ಅನನ್ಯಾಹಿ ಮಯಾಸೀತಾ ಭಾಸ್ಕರೇಣ ಪ್ರಭಾ ಯಥಾ''** ಎಂದು ಹೇಳಿಕೊಂಡಿದ್ದಾನೆ.

## ರಾಮಾಯಣದ ವೈಶಿಷ್ಟತೆ

ರಾಮ ಎನ್ನುವ ಪದವು **ರಮುಕ್ರೀಡಾಯಾಂ** ಎನ್ನುವ ಧಾತುವಿನಿಂದ ಹುಟ್ಟಿದೆ. ಇನ್ನೂ ರಾಮಶಬ್ದವು ನಾಲ್ಕು ರೀತಿಯ ಅರ್ಥವನ್ನು ತಿಳಿಸುತ್ತದೆ. ತಪಸ್ವಿಗಳು ಶ್ರೀರಾಮನಲ್ಲಿ ಅವನನ್ನು ಕುರಿತು ರಮಿಸುತ್ತಾರೆ, ಧ್ಯಾನ ಮಾಡುತ್ತಾರೆ. **ರಮಂತೇ ಯೋಗಿನಃ ಅಸ್ತಿನ್ನಿತಿ ರಾಮಃ** ಜನರನ್ನು ಸುಖಪಡಿಸುತ್ತಾನೆ, ಆನಂದ ಪಡಿಸುತ್ತಾನೆ. ಆದ್ದರಿಂದ ರಾಮ **ರಮಯತೇ ಲೋಕಾನಿತಿ** ಎಂಬ ವ್ಯುತ್ಪತ್ತಿ ತಿಳಿಸುತ್ತದೆ. **ರಾಮಸ್ಯ ಲೋಕರಾಮಸ್ಯ** ಎಂದು ಮುನಿಗಳು ರಾಮ ಶಬ್ದಕ್ಕೆ ಹೆಚ್ಚಿನ ಪೋಷಣೆ ಕೊಟ್ಟಿರುತ್ತಾರೆ. ಈತನು ಲೋಕಾಭಿರಾಮನಾಗಿರುತ್ತಾನೆ – ಹೇಗೆಂದರೆ, ತನ್ನ ಶಬ್ದಪ್ರಪಂಚದಲ್ಲಿ ಅತಿ ಮಧುರವೂ (ಮಧುರ ಸಂಭಾವವುಳ್ಳವನು) ಸರಳವೂ ಆಹ್ಲಾದಕರವೂ ಪಾವನವೂ ಸಕಲ ಸಂಕಷ್ಟಗಳನ್ನು ನಿವಾರಿಸಿ ಪರಮ ಪುರುಷಾರ್ಥವನ್ನು ಕೊಡಲು ಸಮರ್ಥವೂ ಆದ **ರಾಮ** ಎಂಬ ನಾಮಧೇಯವನ್ನು ಮನಸಾ ಯೋಚಿಸಿ ವಶಿಷ್ಟರು **ರಾಮಾ** ಎಂದು ನಾಮಕರಣ ಮಾಡಿದರು (ಕಾಳಿದಾಸನ ರಘುವಂಶ ೧೦–೬೭)



**ರಾಮ ಇತ್ಯಭಿರಾಮೇಣ । ವಪುಷಾ ತಸ್ಯ ಚೋದಿತಾ । ನಾಮಧೇಯಂ ಗುರುಶ್ಚಕ್ರೇ ಜಗತ್ ಪ್ರಥಮ ಮಂಗಲಮ್ ।** ಎಂದು ಅತಿ ರಮ್ಯವಾಗಿ ಮಗುವಿನ ಶರೀರಾಕೃತಿಯನ್ನು ಕಂಡು ಗುರುಗಳು **ರಾಮ** ಎಂದು ಲೋಕಕ್ಕೆ ತೋರಿಸಿಕೊಟ್ಟರು. **ರಘುವರ ಚರಿತಂ ಮನಿಪ್ರಣೀತಂ** ಎಂದು ವಾಲ್ಮೀಕಿ ವರ್ಣಿಸಿದ್ದಾರೆ. ಇಂತಹ ರಾಮಾಯಣವನ್ನು ಯಾರು ನಿತ್ಯ ಪಠಿಸುತ್ತಾರೆ. **''ಯಃ ಪಠೇದ್ರಾಮಾಯಣಂ ಕೃತ್ಸ್ನಂ ಸೀತಾಯಾಃ ಚರಿತಂ ಮಹತ್''** ಎಂದಿರುವುದರಿಂದ ಶ್ರೀ ಸೀತಾದೇವಿಯ ಮಹತ್ ಚರಿತೆ ಆಗಲಿಕ್ಕೆ ಸಾಧ್ಯತೆ ಇದೆ ಅನ್ನುತ್ತಾರೆ. **ವೇದವೇದ್ಯೇ ಪರೇ ಪುಂಶಿ ಜಾತೇ ದಶರತಾತ್ಮಜೆ। ವೇದಃ ಪ್ರಚೇತ ಸಾದಾಸೀತ್ ಸಾಕ್ಷಾದ್ರಾಮಾಯಣಾತ್ಮಕಂ॥** ಇಲ್ಲಿ ಪರೇ ಅನ್ನುವುದನ್ನು ಸ್ವಲ್ಪ ಕೂಲಂಕಷವಾಗಿ ಅಧ್ಯಯನ ಮಾಡಿದಾಗ ಇಲ್ಲಿ ಶ್ರೀರಾಮನಚರಿತೆ ಅಪ್ರಧಾನ, ಸೀತಾದೇವಿಯ ಚರಿತೆ ಪ್ರಧಾನ ಅಂತ ವಾದಿಸಿದವರಿದ್ದಾರೆ. ಇರಲಿ. ರಾಮಾಯಣವು ವೇದಗಳ ಸಂದೇಶವೂ ಹೌದು.

ಇದಂ ಪವಿತ್ರಂ ಪಾಪಘ್ನಂ ಪುಣ್ಯಂ ವೇದೈಶ್ಚಸಂಮಿತಂ
ವೇದೋಪಬ್ರುಂಹಣಾರ್ಥಾಯ ತಾವಗ್ರಾಹಯತ ಪ್ರಭುಃ

(ವೇದೋಪಬ್ರುಂಹಣವೆಂದರೆ ವೇದಗಳಲ್ಲಿ ಪೂರ್ಣವಾಗಿ ಪ್ರತಿಪಾದ್ಯನಾದ ಶ್ರೀನಾರಾಯಣನ ವಿಷಯದ ವಿವರಣೆ ಎಂದಿದೆ.)

ವೇದದಲ್ಲಿ ಉಕ್ತವಾದ ಸಂದೇಶವನ್ನು ಜಗತ್ತಿನಲ್ಲಿ ಪ್ರಚಾರ ಮಾಡುವ ಉದ್ದೇಶದಿಂದ ಈ ಕಾರ್ಯವನ್ನು ವಾಲ್ಮೀಕಿ ಲವಕುಶರ ಮಾಧ್ಯಮದಿಂದ ಸಿದ್ಧಪಡಿಸಿದರೆಂದು ಅತಿ ಪುರಾತನ ಶ್ಲೋಕದಿಂದ ತಿಳಿದುಬರುತ್ತೆ ರಾಮ ಭಗವಂತನ ಅವತಾರವೆಂಬುದನ್ನು ಇಲ್ಲಿ ಪುಷ್ಟೀಕರಿಸಲಾಗಿದೆ.

**ವೇದ ವೇದ್ಯೇ ಪರೇಪುಂಸಿ ಜಾತೋ ದಶರಥಾತ್ಮ ಜೆ**
**ವೇದಃ ಪ್ರಚೇತಸಾದಾಸೀತ್ ಸಾಕ್ಷಾದ್ರಾಮಾಯಣಾತ್ಮಕಮ್ ॥**
**ರಘುವರ ಚರಿತಂ ಮುನಿವರ ಪ್ರಣೀತಂ ॥**

ಇದು ಸ್ವಯಂ ವಾಲ್ಮೀಕಿ ಮುನಿಗಳೇ ಹೇಳಿಕೊಂಡಿದ್ದಾರೆ. ಇದರಿಂದ ಶ್ರೀರಾಮನಚರಿತೆಯೇ ಎಂಬುದಾಗಿ ಅರ್ಥವಾಗುವುದು ಸಮಂಜಸ.

## ಗಾಯತ್ರೀ ಸ್ವರೂಪ

**ಗಾಯತ್ರ್ಯಾಶ್ಚ ಸ್ವರೂಪಂ ತದ್ರಾಮಾಯಣಾಮೃತಂ॥**

ಗಾಯತ್ರೀ ಮಂತ್ರದಲ್ಲಿ ೨೪ ಅಕ್ಷರಗಳಿವೆ. ರಾಮಾಯಣದಲ್ಲಿಯೂ ೨೪,೦೦೦ ಶ್ಲೋಕಗಳಿವೆ.

**ಚತುರ್ವಿಂಶತ್ ಸಹಸ್ರಾಣಿ ಶ್ಲೋಕಾನಾಮುಕ್ತವಾನ್ಋಷಿಃ**
**ತಥಾಸರ್ಗ ಶತಾನ್ ಪಂಚಶಟ್ ಕಾಂಡಾನಿ ತಥೋತ್ತರಂ**

ಋಗ್ವೇದದಲ್ಲಿ ೨೪ ಶಾಖೆಗಳನ್ನು ಕಾಣಬಹುದು.

ರಾಮನಾಮ ತಾರಕವೆಂದು ರುದ್ರದೇವರು ಪಾರ್ವತಿಯ ಪ್ರಶ್ನೆಗೆ ಉತ್ತರವಾಗಿ **''ಸಹಸ್ರನಾಮ ತತ್ತುಲ್ಯಂ ರಾಮನಾಮ ವರಾನನೇ''** ಎಂದು ರಾಮನಾಮದ ಹಿರಿಮೆಯನ್ನು ಹೇಳಿದ್ದಾರೆ.

ರಾಮನಾಮ, ಪರಮಾತ್ಮನ ಜ್ಞಾನ ಆನಂದರೂಪವೆಂಬುದು ತಿಳಿಸುತ್ತಿದೆ. ರಾಮಶಬ್ದದಲ್ಲಿ ಮೂರು ಅಕ್ಷರಗಳಿವೆ **ರ ಅ ಮ** ಎಂದು. **ರ** = ಆನಂದರೂಪ (ರಮಣ), **ಅ** = ಅಮಿತ (ಮಿತಿಯಿಲ್ಲದ) **ಮ** = ಜ್ಞಾನ. ಹೀಗೆ ರಾಮ ಒಂದು ಅಖಂಡ ಪದವಾಗುತ್ತದೆ. ಅಲ್ಲದೇ, ರಾಮಶಬ್ದವು ಭೌತಿಕ ಸಂಕೇತವೂ ಆಗುವುದು.

**ರ** = ಅಗ್ನಿ **ರಂ** ಬೀಜಾಕ್ಷರ = ಪೃಥಿವಿ
**ಅ** = ವಾಯು **ವಂ** ಬೀಜಾಕ್ಷರ = ಜಲ
**ಮ** = ಆಕಾಶ **ಮಂ** ಬೀಜಾಕ್ಷರ = ಆಕಾಶ

ವಾಲ್ಮೀಕಿ ಋಷಿಗಳು ರಾಮಾಯಣವನ್ನು ಬರೆಯುವ ಹಿಂದೆ ಸಹಸ್ರಾರು ಶ್ಲೋಕಗಳಲ್ಲಿದ್ದಿತು. ಅದನ್ನು ಸಂಗ್ರಹವಾಗಿ ೨೪ ಸಾವಿರ ಶ್ಲೋಕಗಳಲ್ಲಿ ಬರೆಯಲಾಗಿದೆ ಅಂದಿದ್ದಾರೆ.

**''ರಘುವರ ಚರಿತಂ ಶತಕೋಟಿವಿಸ್ತರಂ''** ಬ್ರಹ್ಮದೇವರು ಮೂಲ ರಾಮಾಯಣವನ್ನು ಶತಕೋಟಿ ವಿಸ್ತೃತವಾಗಿ ರಚಿಸಿ ನಾರದರಿಗೆ ಬೋಧಿಸಿದರು. ನಂತರ ನಾರದರು ಅದನ್ನು ಸಂಕ್ಷೇಪವಾಗಿ ತಿಳಿಸಲು ಮತ್ತು ಭೂಲೋಕದಲ್ಲಿ ಪ್ರಖ್ಯಾತ ಮಾಡುವ ಉದ್ದೇಶದಿಂದ ವಾಲ್ಮೀಕಿ ಮುನಿಗಳಲ್ಲಿ ಬ್ರಹ್ಮದೇವರು ಕಳುಹಿಸಿದರೆಂದು ತಿಳಿದುಬರುತ್ತೆ (ಮತ್ಸ್ಯಪುರಾಣ)

**ರಾಮಾಯಣದಲ್ಲಿ ಏಳರ ಸಂಖ್ಯೆಯ ವೈಶಿಷ್ಟ್ಯತೆ**

ರಾಮಾಯಣದಲ್ಲಿ ೭ ಕಾಂಡಗಳು ಇರುತ್ತೆ. ವಾಲ್ಮೀಕಿ ೭ ಕಾಂಡಗಲ್ಲಿ ಏಕೆ ಬರೆದರು, ಅಂದರೆ ಹೀಗೆ ಜ್ಞಾನಿಗಳು ತಿಳಿಸುತ್ತಾರೆ.

೧. **ರಾ** = ಇದು ೨ನೇ **ಅಕ್ಷರ** ಮತ್ತು **ಮ** = ಇದು ೫ನೇ **ಅಕ್ಷರ** ಕೂಡಿಸಿದರೆ ೭ ಆಗುತ್ತದೆ. (೨ + ೫ = ೭)
ಯ **ರ** ಲ ವ ಶ ಷ ಸ ಹ ಇದರಲ್ಲಿ ರ ಎರಡನೇ ಅಕ್ಷರ
ಪ ಫ ಬ ಭ **ಮ** ಇದರಲ್ಲಿ ಮ ಐದನೇ ಅಕ್ಷರ



೨. ಶ್ರೀರಾಮನ ಅವತಾರ **ದಶಾವತಾರ**ಗಳಲ್ಲಿ ಏಳನೆಯದು.
೩. ಶ್ರೀರಾಮನ ನಕ್ಷತ್ರ **ಪುನರ್ವಸು** – ಏಳನೆಯ ನಕ್ಷತ್ರ
೪. ಲೋಕಗಳು ಏಳು – **ಭೂಃ, ಭುವ ರ್ಲೋಕ, ಸ್ವರ್ಗ, ಮಹರ್ಲೋಕ, ಜನೋಲೋಕ, ತಪೋಲೋಕ, ಸತ್ಯಲೋಕ**
೫. ದ್ವೀಪಗಳು ಏಳು – **ಜಂಬೂ, ಶಾಕ, ಶಾಲ್ಮಲಿ, ಕುಶ, ಕ್ರೌಂಚ, ಪ್ಲಕ್ಷ, ಪುಷ್ಕರ**
೬. ಸಾಗರಗಳು ಏಳು – **ಲವಣ, ಇಕ್ಷು, ಸುರ, ಸರ್ಪಿ, ದಧಿ, ಕ್ಷೀರ, ಜಲ**
೭. ಛಂದಸ್ಸು ಏಳು – **ಅನುಷ್ಟುಪ್, ಗಾಯತ್ರಿ, ಉಷ್ಣಿಕ್, ಬೃಹತಿ, ತ್ರಿಷ್ಟುಪ್, ಮಹತಿ ಹಾಗೂ ಜಗತೀ**
೮. ಸ್ವರಗಳು ಏಳು – **ಸ ರಿ ಗ ಮ ಪ ದ ನಿ.**
೯. ವಾರಗಳು ಏಳು – **ರವಿ, ಸೋಮ, ಮಂಗಳ, ಬುಧ, ಗುರು, ಶುಕ್ರ ಶನಿವಾರಗಳು**
೧೦. ಮಾನವ ಶರೀರದಲ್ಲಿ ಧಾತುಗಳು ಏಳು – **ಅನ್ನರಸಿ, ರಕ್ತ, ಮಾಂಸ, ಮೇಧ, ಮಾಂಸ, ಅಸ್ತಿ, ಶೃಕ್**
೧೧. ಜ್ಞಾನೇಂದ್ರಿಯಗಳು ಏಳು – **ಕಣ್ಣು, ಮೂಗು, ಕಿವಿ, ನಾಲಿಗೆ, ತ್ವಕ್, ಮನಸ್ಸು ಮತ್ತು ಬುದ್ಧಿ.**

ಹೀಗೆ ರಾಮಾಯಣದಲ್ಲಿ ಕಾಣಬಹುದಾದ ಆಧ್ಯಾತ್ಮ ಸ್ವರೂಪ.

ರಾಮಾಯಣವನ್ನು ಪಠಿಸಲು ಅಧಿಕಾರಿಗಳು ಯಾರು ?

**ಗಾಣಪತ್ಯೇಷು ಶೈವೇಷು ಶಾಕ್ತ ಸೌರೇಷ್ವಷ್ಟದಃ**
**ವೈಷ್ಣವೇಷ್ಯಪಿ ಯಂತ್ರೇಷು ರಾಮ ಮಂತ್ರ ಫಲಾಧಿಕಃ**

ಈ ರೀತಿ ರಾಮಾಯಣವು ಸರ್ವತೋಮುಖವಾಗಿ ಅಖಂಡ ಕಾವ್ಯವಾಗಿ ಜಗತ್ತಿನಲ್ಲಿ ಪ್ರಖ್ಯಾತವಾಗಿದೆ. ರಾಮಾಯಣವು ಕೇವಲ ಕಾವ್ಯವಷ್ಟೇ ಅಲ್ಲ ಶಾಸ್ತ್ರವೂ ಆಗಿದೆ. ಶಾಸ್ತ್ರವೂ ಹೌದು ಇತಿಹಾಸವೂ ಆಗಿರುತ್ತೆ. ಭಾಗವತ ಮತ್ತು ಮಹಾಭಾರತಗಳಲ್ಲಿ ಶಾಸ್ತ್ರವು ಮಂತ್ರಪೂರ್ಣವಾಗಿ ತಿಳಿಸುವುದು. ಅದೇ ರೀತಿ ಈ ಎರಡರಲ್ಲಿರುವ ಮಂತ್ರಗಳಿಂದ ತುಂಬಿರುವುದು ರಾಮಾಯಣ.

**ಶ್ರೀಮದ್ಭಾಗವತಂ ಶಾಸ್ತ್ರಂ ಮೂಲಮಂತ್ರೋಪಬೃಂಹಣಂ**
**ಚರ್ಮಶ್ಲೋಕ ತಾತ್ಪರ್ಯ ಗ್ರಾಹಕಂ ಭಾರತಂ ಮಹತ್**
**ಇದಂ ರಾಮಾಯಣಂ ಶಾಸ್ತ್ರಂ ದ್ವಯಮಂತ್ರೋಪಬೃಂಹಣಂ**

[ರಾಮಾಯಣ–ಈ ಶಬ್ದದ ವ್ಯಾಕರಣ ರೀತ್ಯಾ ವ್ಯುತ್ಪತ್ತಿ ಹೀಗಿರುತ್ತೆ. **ಇಣ್** ಗತೌ (ಅಯಗತೌ) ಎಂಬ ಧಾತುವಿನ ಮೇಲೇ ಲ್ಯುಟ್ ಪ್ರತ್ಯಯವು ಸೇರಿಸಿದರೆ ಅಯನವೆಂಬುದಾಗುತ್ತೆ. ಅಂದರೆ ಸಂಚಾರ, ಚರಿತೆ, ಅಂತ. ರಾಮನ ಆಯನ ಚರಿತೆ ಯಾವ ಕೃತಿಯಲ್ಲಿರುತ್ತದೋ **ಅದೇ ರಾಮಾಯಣ.**]

ಮೂಲರಾಮಾಯಣವನ್ನೇ ಆಧರಿಸಿ ವಾಲ್ಮೀಕಿ ಪ್ರಸ್ತುತ ಕಾವ್ಯವನ್ನು ಬರೆದಿರುವುದಾಗಿ ತಾನೇ ಹೇಳಿಕೊಂಡಿದ್ದಾನೆ. ಆದರೂ ವಾಲ್ಮೀಕಿ ಅಯೋಧ್ಯೆಯಲ್ಲಿ ಆಗ ದಶರಥ ಮಹಾರಾಜ, ಅವನ ಮೂರು ಮಡದಿಯರು, ೪ ಮಕ್ಕಳು ರಾಜ್ಯಭಾರ ಇತ್ಯಾದಿಯ ವಿಷಯವು ಕವಿಗೆ ತಿಳಿದಿತ್ತು. ಆದ್ದರಿಂದ ರಾಮಾಯಣ ಒಂದು ಸಮಕಾಲೀನ ಸತ್ಯಕಥೆಯಾಗಿದೆ. (A contemporary work and a historical fact and description)

**ಪ್ರಾಪ್ತ ರಾಜ್ಯಸ್ಯ ರಾಮಸ್ಯ ವಾಲ್ಮೀಕೀ ಭಗವಾನ್ ಋಷಿಃ**
**ಚಕಾರಚರಿತಂ ಕೃತ್ಸ್ನಂ ವಿಚಿತ್ರಪದಮರ್ಥವತ್**
**ಶ್ರೀವಿಷ್ಣೋ ಪ್ರಥಮೇಕಾಂಡೇ ಜಗಜ್ಜನನ ಹೇತುತಾ**
**ದ್ವಿತೀಯೇ ಸ್ಥಿತಿ ಹೇತುತ್ವಂ ತೃತೀಯೇ ಮೋಕ್ಷದಾಯುತೂ**
**ಚತುರ್ಥೇಗುಣಸಂಪತ್ತಿಃ ಪಂಚಮೇ ಸರ್ವ ಹತ್ಸ್ವತಾ**
**ಷಷ್ಟೇ ವೇದಾಂತವೇದ್ಯತ್ವಂ ಸಪ್ತಮೇ ಸ್ರಷ್ಟಕೇತುತಾ ।**
**ಏವಂ ವಿಷ್ಣುಃ ಪರಂ ತತ್ವಂ ರಾಮಾತ್ವೇತಿ ಸುನಿಶ್ಚಿತಂ**

ಒಂದು ಸಮಕಾಲೀನ ಕೃತಿಯಾದ್ದರಿಂದ ರಾಮಾಯಣವು ಅತ್ಯಂತ ಪ್ರಮಾಣ ಕೃತಿ. ಶ್ರೀಮನ್ಮಹಾಭಾರತವು ಶ್ರೀ ವೇದವ್ಯಾಸರಿಂದ ರಚಿತವಾಯಿತು. ಅದೂ ಸಹಾ ಸಮಕಾಲೀನಗ್ರಂಥ ಪ್ರಮಾಣವೂ ಆಗಿರುತ್ತೆ.

ಇಷ್ಟು ಉಪೋದ್ಘಾವಾದ ನಂತರ ವಾಲ್ಮೀಕಿ ಯಾರು ? ಇಂತಹ ಸರ್ವೋತ್ಕೃಷ್ಟ ಅಮರ ಕಾವ್ಯವನ್ನು ಬರೆದ ಮಹಾಪುರುಷನ ಪೂರ್ವೋತ್ತರ ಇತಿಹಾಸ ತಿಳಿಯಲು ಪ್ರಯತ್ನ ಮಾಡುವ.

## ವಾಲ್ಮೀಕಿಯ ಬಗ್ಗೆ

ಇಲ್ಲಿ ವಾಲ್ಮೀಕಿ ಸೂತ ಪುತ್ರ. ಬೇಡರ ಬುಡಕಟ್ಟಿಗೆ ಸೇರಿದ ಜಾತಿಯವನು. ಅನಾಗರಿಕ, ಕ್ರೂರಿ ಎಂದು ಜನಸಾಮಾನ್ಯರಲ್ಲಿ ಪ್ರಚಲಿತವಾಗಿದೆ. ಆದರೆ, ತಾನು ವರುಣನ ಮಗನೆಂದು ಶ್ರೇಷ್ಠಋಷಿ ಕುಲದಲ್ಲಿ ಹುಟ್ಟಿದವನು. ಸುಸಂಸ್ಕೃತ ಬ್ರಾಹ್ಮಣ. ಯಾವುದೋ ದುರ್ದೈವವಶಾತ್ ಬೇಡರ ಕೈಗೆ ಸಿಕ್ಕಿ ಅವರಂತೆ ನಡೆದುಕೊಂಡ. ಅಂಥವನನ್ನು ಉದ್ಧಾರ ಮಾಡಬೇಕೆಂದು ಭಗವಂತ ಸಂಕಲ್ಪಿಸಿದ. ಅದರಂತೆ ವಾಲ್ಮೀಕಿ ಆದ.



ಈಗ ಪ್ರಚಲಿತ ಕಥೆ ಪ್ರಕಾರ ವಾಲ್ಮೀಕಿ ಒಬ್ಬ ಬೇಡನಾಗಿದ್ದ, ದರೋಡೆಕಾರನಾಗಿದ್ದ, ಹಾದಿಹೋಕರನ್ನು ಹಿಂಸಿಸಿ ಅವರನ್ನು ಕೊಂದು ಇದ್ದಬದ್ದ ವಸ್ತುಗಳನ್ನು ದೋಚಿ ಜೀವನ ಸಾಗಿಸುತ್ತಿದ್ದ.

ಒಮ್ಮೆ ಕೆಲಋಷಿಗಳ ನಿಗೂಢವಾದ ಮಾತುಗಳಿಗೆ ಮರುಳಾಗಿ ಪರಿವರ್ತನೆಗೊಂಡು ತಪಸ್ಸು ಮಾಡಿದ. ಹುತ್ತದಲ್ಲೇ ಬೆಳದ. ದಾರಿತೋರಿತು, ಕಣ್ಣು ತೆರೆಯಿತು, ವ್ಯಾಧ ವಾಲ್ಮೀಕಿಯಾದ ಎಂದು ಹೇಳುವವರಿದ್ದಾರೆ.

ಆದರೆ ನಿಜ ಸಂಗತಿ ತಿಳಿಯಬೇಕು. ಪದ್ಮಪುರಾಣ ಪಾತಾಳಖಂಡದಲ್ಲಿ ಇದರ ಬಗ್ಗೆ ವಿವರಣೆ ಇದೆ. ಕವಿ ತನ್ನ ಪೂರ್ವ ವೃತ್ತಾಂತವನ್ನು ಹೇಳಿಕೊಳ್ಳುತ್ತಾನೆ. **ಪ್ರಾಚೇತಸೋ ಮುನಿಃ** ಎಂದು. ಪ್ರಾಚೇತಸ (ಅಂದರೆ ಸಮುದ್ರರಾಜ). ಅಂದರೆ ವರುಣ. ಅವನಿಗೆ ಭೃಗು, ವಶಿಷ್ಠ, ವಾಲ್ಮೀಕಿ(ಅಗ್ನಿಶರ್ಮ) ಎಂಬ ಮೂವರು ಪುತ್ರರಲ್ಲಿ ವಾಲ್ಮೀಕಿ ಮೂರನೆಯವ. ಅವನೇ ಪ್ರಾಚೇತಸ (ಭಾರತ–ವನಪರ್ವ). ಪ್ರಾಚೇತಸನ ಸಂತಾನದಲ್ಲಿ ದೀರ್ಘವರ್ಣನು ಒಬ್ಬನು. ಅವನ ಯುಕ್ತ ವಯಸ್ಸಿನಲ್ಲಿ ಬ್ರಾಹ್ಮಣ ಕನ್ಯೆಯನ್ನು ವಿವಾಹವಾದ. ತನ್ನದೇ ಆದ ಆಶ್ರಮವನ್ನು ಕಟ್ಟಿಕೊಳ್ಳಲು ಒಂದು ಗೋಂಡಾರಣ್ಯವನ್ನು ದಾಟಿಹೋಗುವಾಗ ಕೆಲ ಬೇಡರ ಗುಂಪು ಅವರನ್ನು ಅಟ್ಟಿಬಂದಾಗ ಆ ಸತೀಮಣಿಗೆ ಆಗತಾನೇ ಹುಟ್ಟಿದ ಗಂಡುಮಗುವನ್ನು (ಅಗ್ನಿಶರ್ಮ) ಬೇಡರು ಕಸಿದುಕೊಂಡು ಹೋದರು. ಅವನಿಗೆ ರತ್ನಾಕರನೆಂದು ನಾಮಕರಣ ಮಾಡಿ ಬೆಳೆಸಿದರು. ಆ ಮಗು ಅವರಲ್ಲೇ ಅವರಂತೇ ಬೆಳೆಯಿತು. ಆ ಜಾತಿಗೆ ತಕ್ಕಂತೆ ದರೋಡೆಕಾರನೇ ಆದ. ಹಿಂದೆ ತಿಳಿಸಿದಂತೆ ಒಮ್ಮೆ ಕೆಲಋಷಿಗಳನ್ನು (ಇಲ್ಲಿ ದೇವಋಷಿಗಳಾದ ನಾರದರೇ ಇವನನ್ನು ಕಂಡರೆಂದು ಪ್ರತೀತಿಯಿದೆ.) ಕಾಡಿನಲ್ಲಿ ಕಂಡು ಅಡ್ಡಗಟ್ಟಿ ಅವರನ್ನು ಹಿಂಸಿಸಲು ಅವರಲ್ಲಿದ್ದ ವಸ್ತುಗಳನ್ನು ಅಪಹರಿಸಲು ಪ್ರಯತ್ನಮಾಡಿದ. ಆದರೆ ಆ ಋಷಿಗಳು ಅವನನ್ನು ಕಂಡು ಹೆದರಿ ಜೀವಕ್ಕಾಗಿ ಓಡದೆ ನಿರ್ಭೀತರಾಗಿ ನಿಂತಿರುವದನ್ನು ನೋಡಿದ. ಆಗ ಋಷಿಗಳು ಹೇ ಬೇಡನೇ ನೀನು ಈ ರೀತಿಯ ಹಿಂಸಾಪ್ರವೃತ್ತಿಯ ಪಾಪಜೀವನ ಯಾರಿಗಾಗಿ ಮಾಡುತ್ತಿರುವೆ? ಹೀಗೆ ಮಾಡುವುದು ಪಾಪವಲ್ಲವೇ ? ಎಂದು ಕೇಳಿದರು.

ನನ್ನ ಮಡದಿ ಮಕ್ಕಳು ಹಿರಿಯ ಮಾತಾಪಿತೃಗಳನ್ನು ಸಾಕುವುದಕ್ಕಾಗಿ ಹೀಗೆ ಮಾಡುವೆ. ನನ್ನ ಸ್ವವಿಹಿತ ಕಾರ್ಯದಿಂದ ಇದು ಸಂಸಾರಿಯಾದ ನನಗೆ ಅನಿವಾರ್ಯವಾದ್ದರಿಂದ ಪಾಪವೋ ಪುಣ್ಯವೋ ಅದರ ಬಗ್ಗೆ ನಾನು ತಿಳಿಯಬೇಕೆಂಬುದಿಲ್ಲ ಎಂದು ಉತ್ತರಿಸಿದ.

ಆಗ ಋಷಿಗಳು ಕೇಳುತ್ತಾರೆ. ಬೇಡನೇ ಕೇಳು. ಈ ಹೀನಕೃತ್ಯದಿಂದ ಎಷ್ಟೊಂದು ಪಾಪಸಾಧನೆ ಮಾಡಿರುವೆ. ನಿನ್ನ ಸಂಪಾದನೆಯನ್ನು ನಿನ್ನ ಸತೀಸುತರು ಅನುಭವಿಸುತ್ತಾರೆ ಅಲ್ಲವೇ? ಹಾಗೇ ನಿನ್ನ ಕೂಡಿಟ್ಟ ಪಾಪರಾಶಿಯಲ್ಲಿ ಅವರು ಪಾಲಾಗಬಲ್ಲರೇ ?

ಬೇಡ ಈ ಮಾತುಗಳನ್ನು ಕೇಳಿ ತುಸುಹೊತ್ತು ಪೇಚಿಗೆ ಸಿಲುಕಿ ಚಿಂತಾಕ್ರಾಂತನಾಗಿ ಮಾತನಾಡಿದ. ''ನನ್ನ ಸಂಪಾದನೆಯಲ್ಲಿ ಭಾಗಿಗಳಾದವರು ಖಂಡಿತವಾಗಿಪಾಪದಲ್ಲೂ ಪಾಲುದಾರರಾಗುತ್ತಾರೆ. ಇರಿ, ಈ ವಿಷಯವನ್ನು ಈಗಲೇ ಕೇಳಿ ಬರುತ್ತೇನೆ. ಅಲ್ಲಿಯವರೆಗೂ ನೀವು ಈ ಕಾಡನ್ನು ಬಿಟ್ಟು ಹೋಗಕೂಡದು'' ಎಂದು ಮನೆಗೆ ಧಾವಿಸಿದ. ಋಷಿಗಳು ಕೇಳಿದ ಪ್ರಶ್ನೆಯನ್ನೇ ತನ್ನ ಮಾತಾಪಿತ ಸತಿಯರನ್ನು ಕೇಳಿದ. ''ನಿಮ್ಮನ್ನು ಸಾಕಲು ನಾನು ಮಾಡಬಾರದ ಹಿಂಸಾಚಾರದಿಂದ ನಿಮಗೆ ಅನ್ನವನ್ನು ತಂದುಕೊಡುತ್ತಿದ್ದೆ. ಆ ಹಿಂಸಾಚಾರದಿಂದ ಸಾಕಷ್ಟು ಪಾಪಸಂಪಾದನೆ ಮಾಡಿರುತ್ತೇನೆ ಅಂತ ಗೊತ್ತಾಯಿತು. ನೀವು ನನ್ನ ದುಡಿತದ ಸಂಪಾದನೆಯಲ್ಲಿ ಪಾಲು ಪಡೆದಂತೆ ನನ್ನ ಪಾಪಕೃತ್ಯದಲ್ಲೂ ಪಾಲು ಆಗುತ್ತೀರಾ?'' ಎಂದು ಕೇಳಿದ. ಅದಕ್ಕೆ ಸತಿ ಹೇಳುತ್ತಾಳೆ ''ಪ್ರಾಣಪತಿ! ನಮ್ಮನ್ನು ಸಾಕುವುದು ನಿನ್ನ ಹೊಣೆ, ಧರ್ಮ. ಅದನ್ನು ಹೇಗೆ ಸಂಪಾದಿಸುತ್ತೀಯೋ ನಾವು ಹೊಣೆಗಾರರಾಗಲು ಸಾಧ್ಯವಿಲ್ಲ. ನಿನ್ನ ಪಾಪಕೃತ್ಯವನ್ನು ನಾವೇಕೆ ಹಂಚಿಕೊಳ್ಳಬೇಕು ?''

**ವೃದ್ಧೌಚ ಮಾತಾಪಿತರೌ ಸಾಧ್ವೀ ಭಾರ್ಯಾಃ ಸುತಃ ಶಿಶುಃ ।**
**ಅಪ್ಯಕಾರ್ಯ ಶತಂ ಕೃತ್ವಾ ಭರ್ತವ್ಯಾ । ಇತಿಮನುರಬ್ರವೀತ್**

ತಂದೆ ತಾಯಿಗಳು ವೃದ್ಧರಾಗಿರುವಾಗ ಸಾಧ್ವೀಮಣಿ ಸತಿ ಇರಬೇಕಾದರೆ ಸುತನು ಇನ್ನೂ ಚಿಕ್ಕವನಿದ್ದಾಗ ಮನುಷ್ಯನು ನೂರಾರು ಅಕೃತ್ಯ (ಹೇಗಾದರೂ) ಸಂಪಾದಸಿ ಅವರನ್ನು ಸಲಹಬೇಕೆಂದು ಮನುಸ್ಮೃತಿ ತಿಳಿಸುತ್ತದೆ. ವಿಚಾರ ಏನೆಂದರೆ ಅಕೃತ್ಯ ಕಾರ್ಯಶತಂ ಎಂದು ಹೇಳಿದಾಗ ಮಾಡಬಾರದ ಪಾಪ ಕಾರ್ಯ(ಲಂಚ, ದರೋಡೆ, ಚೋರ, ಹಿಂಸೆ ಇತ್ಯಾದಿ)ಗಳಿಂದಲಾದರೋ ತನ್ನನ್ನು ನಂಬಿದವರನ್ನು ಸಾಕಬೇಕು ಎಂದು ಮನು ಹೇಳುತ್ತಾನೆ.

ಈ ಒಂದು ವಾಕ್ಯ ಈಗಿನ ರಾಜಕಾರಣಿಗಳಿಗೆ ಅಧಿಕಾರಿಗಳಿಗೆ ಬಹಳ ಅನುಕೂಲ. ತಮ್ಮ ಸಂಪಾದನೆಯನ್ನೂ ಸಮರ್ಥಿಸುವಂತಿದೆ. ಆದರೆ ಮನುಸ್ಮೃತಿ ರೂಢಾರ್ಥ ತಿಳಿಯಬೇಕು. ದುಷ್ಟ ಮಾರ್ಗ ವಂಚನೆಯಿಂದ ಅಲ್ಲ. ಅವನ ವಾಕ್ಯವು ಅರ್ಥವಾದವಾಗಿದೆ. ಸಂಪಾದನೆ ಶುದ್ಧವಾಗಿರಬೇಕು. ಯದೃಚ್ಛಾ ಲಾಭನಾಗೆ ನೀತಿಮಾರ್ಗದಲ್ಲಿ ನಡೆದು ನಂಬಿದವರನ್ನು ಬಿಡದೇ ಕಾಯಬೇಕು ಎಂಬುದೇ ಇದರ ಮರ್ಮ. ಇದಕ್ಕೆ ಕುಚೇಲನ ಆಭ್ಯಯಿಕೆಯಿಂದ ಸ್ಪಷ್ಟವಾಗಿರುವುದೆಂದು ತಿಳಿಯಬೇಕು ಎಂದು ಸಾಕು ತಂದೆ ತಾಯಿ ಹೆಂಡತಿ ಮಕ್ಕಳು ಏಕಕಂಠದಿಂದ ಹೇಳಿದರು. ಬೇಡನ ಅರಿವಿನ ಕಣ್ಣು ತೆರೆಯಿತು. ತನ್ನ ಅನರ್ಥವನ್ನು ತಿಳಿದ ಒಮ್ಮೆಲೆ ಸಿಡಿಲು ಬಡಿದಂತಾಯಿತು. ಕೂಡಲೇ ಋಷಿಗಳಲ್ಲಿಗೆ ಬಂದು ತನಗೆ ನಿಜ ಮಾರ್ಗದರ್ಶನ ತೋರಿ ಕಾಪಾಡಿರೆಂದು ಬೇಡಿದ. ಋಷಿಗಳಿಂದ ಉಪದೇಶ ಪಡೆದ ವ್ಯಾಧ ಎಲ್ಲವನ್ನೂ ತೊರೆದ. ತನ್ನ ಆತ್ಮ ಸಾಧನೆಗಾಗಿ ಸಿದ್ಧನಾದ. ತಪಸ್ಸು ಮಾಡಿದ. ವರ್ಷಗಳು ಕಳೆದವು.



ತನ್ನ ಸುತ್ತ ಒಂದು ಹುತ್ತ ಬೆಳೆಯಿತು. ಆ ಹೊತ್ತಿಗೆ ತನ್ನ ಅಂತಃಚಕ್ಷು ತೆರೆಯಿತು. ಅಪರೋಕ್ಷವಾಯಿತು. ವ್ಯಾಧ **ವಾಲ್ಮೀಕಿ**ಯಾದ. **ವಲ್ಮೀಕ** ಎಂದರೆ ಹುತ್ತ. ಅದರಿಂದ ಹೊರಬಂದ ಹೊಸ ಲೋಕವನ್ನೇ ಕಂಡ. ಆದ್ದರಿಂದ ವಾಲ್ಮೀಕಿ ಎಂದು ಹೆಸರು ಬಂತು. ಆ ವಾಲ್ಮೀಕಿಯೇ ಮುಂದೆ ಶ್ರೀರಾಮಾಯಣವನ್ನು ಲೋಕಕ್ಕೆ ಒಂದು ಮಹೋನ್ನತ ಕೊಡುಗೆಯಾಗಿ ಕೊಟ್ಟು ಆದಿಕವಿಯೆನಿಸಿದ. ಅದನ್ನೇ ಜಪಿಸುತ್ತಾ ಮರಾಮರಾಮರಾಮ ಎನ್ನುತ್ತಾ ಕೊನೆಗೆ **ರಾಮ** ಎನ್ನುವಂತಾಯಿತು. ಹೀಗಾಗಿ ಬೇಡ ವಾಲ್ಮೀಕಿಯಾದ ಜ್ಞಾನಿಯಾಗಿ ಶ್ರೀರಾಮನ ಕಥೆ ರಾಮಾಯಣವನ್ನು ಬರೆಯುವಂತಾಯಿತು ಎಂದಿದ್ದಾರೆ. (ವಾಲ್ಮೀಕಿ ಜನ್ಮತಃ ವಿಪ್ರನಾದರೂ ಬೆಳೆದದ್ದು ಅರಣ್ಯವಾಸಿಗಳಾದ ಬೇಡರ ಸಂಗಡ. ಕ್ರೂರಿ ನಿರ್ದಾಕ್ಷಿಣ್ಯ ಕೊಲ್ಲುವ ಮನೋವೃತ್ತಿ ಪ್ರಾರಬ್ಧವಶಾತ್ ಉಂಟಾಯಿತು. ಆದರೂ ಅವನಲ್ಲಿ ಮಹಾಶಕ್ತಿ ಜ್ಞಾನಜ್ಯೋತಿ ಅಡಗಿತ್ತು ಎಂಬುದು ನಾರದರ ಉಪದೇಶದ ಕಾರಣ ಪ್ರಚೋದನೆಯಾಯಿತೆಂಬುದನ್ನು ತಿಳಿಯಬೇಕು.

ವಾಲ್ಮೀಕಿ ಹುಟ್ಟು ಕ್ರೂರಿ. ಕಟುಕವ್ಯಾಧನೆಂಬುದು ಸಾಬೀತಾಗುತ್ತೆ. ಅವನಲ್ಲಿ ಒಂದು ಮಹಾಶಕ್ತಿ ಜ್ಞಾನವು ಇದ್ದಿತು. ಹೊರಗಿನ ಲೋಕಕ್ಕೆ ಕಟುಕನಂತೆ ಕಾಣಬಹುದು. ಆದರೆ ಸತ್ಯಕ್ಕೆ ದೂರಸರಿಯುವುದು ಬೇಡ ಎಂಬ ಅಂಶದ ಕಥೆ ಇಲ್ಲಿ ಕಾಣಬಹುದು.

### ರಾಮಾಯಣ ಕೃತಿಗೆ ಪೂರ್ವ ಸಿದ್ಧತೆ

ಅಯೋಧ್ಯೆಯಿಂದ ಉತ್ತರಕ್ಕೆ ಸುಮಾರು ೨೦–೨೫ ಕಿಲೋಮೀಟರ್ ಸಾಗಿದರೆ ಮಂಜೂಷ ಎಂಬ ಗ್ರಾಮ. ಅದರ ಎಡಪಾರ್ಶ್ವದಲ್ಲಿ ೩–೪ ಕಿಲೋಮೀಟರ್ ಹೊರಟರೆ ರಮ್ಯವಾದ ಆಶ್ರಮ. ಅದೇ ತಮಸಾ ನದಿಯ ತೀರ. ಪ್ರಶಾಂತ ವಾತಾವರಣ. ಗಿಡಮರಗಳಿಂದ ತುಂಬಿ ಕಿಲಕಿಲ ನಾದ ಮಾಡುವ ರಂಗುರಂಗಿನ ಪಕ್ಷಿಗಳು. ಅನೇಕ ಮೃಗಸಿರಿಯ ಸಂಪತ್ತು, ವಿವಿಧ ಹೂಬಳ್ಳಿ, ಹಣ್ಣುಹಂಪಲುಗಳು, ಜುಳುಜುಳು ನಾದ ಮಾಡುತ್ತಿರುವ ತಮಸಾ ನದಿ. ಅದರ ಮಧ್ಯದಲ್ಲಿ ವಿಶಾಲವಾದ ವೇದಿಕೆ. ಪೂರ್ವಕ್ಕೆ ಆಕರ್ಷಕವಾದ ಆಶ್ರಮ, ಸುತ್ತುವರೆದ ಶಿಷ್ಯರ ಆಶ್ರಮಗಳು ಶ್ರೀ ವಾಲ್ಮೀಕಿಮುನಿಗಳ ಸಾಧನಾಭೂಮಿಯಾಗಿತ್ತು.

ಒಂದು ಶ್ರಾವಣ ಮಾಸ ಬೆಳಗಿನ ಝಾವ ಸೂರ್ಯನ ಬೆಳಕು ಅದಾಗ ಬರುತ್ತಿತ್ತು. ವಾಲ್ಮೀಕಿ ಎಂದಿನಂತೆ **''ಬ್ರಾಹ್ಮೀಮುಹೂರ್ತೇಚ ಉತ್ಥಾಯ ಧ್ಯಾಯೇದ್ ದೇವ ಮಧೋಕ್ಷಜಂ''** ಬ್ರಾಹ್ಮೀ ಮುಹೂರ್ತ = ರಾತ್ರಿಯ ಕೊನೆಯ ಯಾವದ ಮುಹೂರ್ತ. ಸೂರ್ಯೋದಯಕ್ಕೆ ಪೂರ್ವದಲ್ಲಿ ಒಂದು ಮುಹೂರ್ತ ಕಾಲ. ಒಂದು ಮುಹೂರ್ತ ಎಂದರೆ ೪೮ ನಿಮಿಷಗಳು. (ರಾತ್ರೇಶ್ಚ ಪಶ್ಚಿಮೇ ಯಾಮೆ ಮುಹೂರ್ತೋ ಬ್ರಹ್ಮ ಉಚ್ಚತೇ) ಮನು ಹೀಗೆ ತಿಳಿಸುತ್ತಾನೆ.

ಬ್ರಹ್ಮೇ ಮುಹೂರ್ತೇ ಬುಧ್ಯೇತ ಧರ್ಮಾರ್ಥೌ ಚಾನು ಚಿಂತಯೇತ್ ಕಾಯ ಕ್ಲೇಶಾಂಶ್ಚ ತನ್ಮೋದಾನ್ ವೇದ ತತ್ವಾರ್ಥ ಮೇವ ಚ

ಬ್ರಾಹ್ಮೀ ಮುಹೂರ್ತದಲ್ಲಿ ತಮಸಾ ನದಿಯಲ್ಲಿ ಸ್ನಾನ ಮಾಡುವ ಉದ್ದೇಶದಿಂದ ನದಿ ಕಡೆಗೆ ನಡೆಯುತ್ತಿದ್ದ. ದಾರಿಯಲ್ಲಿ ಆ ಸುಂದರ ವಾತಾವರಣ. ಪಕ್ಷಿಗಳ ಕಿಲಕಿಲನಾದ, ತಂಪಾದ ಗಾಳಿ, ಗಿಡಮರಗಳು ತಂಗಾಳಿಗೆ ಮೆಲ್ಲಗೆ ತೂಗಾಡುತ್ತಿತ್ತು. ಆ ಮನೋಹರ ದೃಶ್ಯವನ್ನು ನೋಡುತ್ತಾ ಆನಂದದಿಂದ ಸಾಗುತ್ತಿದ್ದ ನದಿಯ ಮಡುವಿನಲ್ಲಿ ಇನ್ನೇನು ಇಳಿಯಬೇಕು ಎಂದಾಗ, ಅಲ್ಲೇ ಒಂದು ಮರದ ರೆಂಬೆಯಲ್ಲಿ ಎರಡು ಕ್ರೌಂಚಪಕ್ಷಿ ದಂಪತಿಗಳು ಸರಸವಾಗಿ ದಾಂಪತ್ಯ ಜೀವನದಲ್ಲಿ ತಲ್ಲೀನವಾಗಿದ್ದ ದೃಶ್ಯ. ಮೃಗಪಕ್ಷಿಗಳಲ್ಲೂ ಈ ಅನುಬಂಧ, ವಾತ್ಸಲ್ಯವನ್ನು ನೋಡುತ್ತಾ ಅಲ್ಲೆ ಸ್ವಲ್ಪಹೊತ್ತು ನಿಂತರು. (ಕ್ರೌಂಚವೆಂದರೆ ಕೊಕ್ಕರೆ, ಕಾಡುಕೋಳಿ ಇವುಗಳಲ್ಲಿ ಒಂದುಜಾತಿ. ಈ ಪಕ್ಷಿಜಾತಿಗಳಲ್ಲಿಯೂ ಗಂಡುಹೆಣ್ಣು ಎಂಬ ಪ್ರಭೇದವನ್ನು ಕಾಣಬಹುದು. ಹೆಣ್ಣು ಪಕ್ಷಿ ಗರ್ಭಿಣಿಯಾಗಿತ್ತು ಎಂದು ವಾಲ್ಮೀಕಿ ತಿಳಿಸುತ್ತಾನೆ. ಗಂಡು ಕ್ರೌಂಚದ ತಲೆಯು ರಕ್ತವರ್ಣದ್ದಾಗಿತ್ತು. ತಾಮ್ರಶೀರ್ಷೇಣ ಮತ್ತೇನ ಪತ್ರಿಣಾ ಸಹಿತೇನವೈ ಎಂದು ಕವಿ ತಿಳಿಸುತ್ತಾನೆ.) ಹೀಗೆ ಎರಡು ಪಕ್ಷಿಗಳ ಮಧುರ ಬಾಂಧವ್ಯ. ಅಷ್ಟರಲ್ಲೇ ತಾನು ಬರಿಯಬೇಕಾದ ಶ್ರೀರಾಮ ಸೀತೆಯರ ದಾಂಪತ್ಯ ಜೀವನದ ಕಡೆ ಮನಸ್ಸು ಹರಿಯುತ್ತದೆ. ಇದರಿಂದ ಪಕ್ಷಿಗಳ ಪ್ರೇಮಸಲ್ಲಾಪದಿಂದ ವಾಲ್ಮೀಕಿಗೆ ತತ್ವಜ್ಞಾನದ ಹಿನ್ನೆಲೆ ಗೋಚರವಾಯಿತು.

ಪರಮಾತ್ಮನ ವಿಚಿತ್ರಲೀಲೆಯನ್ನು ಸ್ಮರಿಸುತ್ತಾ ಈ ಮೂಕ ಪ್ರಾಣಿಗಳಲ್ಲಿಯೂ ಎಷ್ಟೊಂದು ಆತ್ಮೀಯತೆ, ಮಮತೆ. ಹೀಗೆ ವಿಸ್ಮಿತನಾಗಿ ನೋಡುತ್ತಾ ನಿಂತಿರುವಾಗ, ಹಠಾತ್ತಾಗಿ ಆ ಗಂಡು ಪಕ್ಷಿಯನ್ನು ಒಬ್ಬ ವ್ಯಾಧ ತನ್ನ ಬಾಣದಿಂದ ಹೊಡೆದ. ತತ್ಪರಿಣಾಮವಾಗಿ ಅದು ನೆಲಕ್ಕುರುಳಿ ಪ್ರಾಣವನ್ನ ತೆತ್ತಿತು. ಈ ದೃಶ್ಯ ಅನಿರೀಕ್ಷಿತವಾಗಿ ನಡೆದು ಹೋಯಿತು. ವಾಲ್ಮೀಕಿಗೆ ಒಂದು ಆಘಾತವೇ ಆದಂತೆ ಆಯಿತು. ಹೆಣ್ಣು ಪಕ್ಷಿ ತನ್ನ ಪತಿಯನ್ನು ಕಳೆದುಕೊಂಡು ತೀವ್ರವಾಗಿ ರೋದಿಸಿತು. ಆ ರೋದನೆಯಿಂದ ವಾಲ್ಮೀಕಿಯ ಮನ ಕರಗಿತು. ಕಾರುಣ್ಯ ತುಂಬಿತು. ಆ ದೃಶ್ಯವನ್ನು ವಾಲ್ಮೀಕಿ ಹೃದಯ ಸ್ಪರ್ಶದಿಂದ ವರ್ಣಿಸುತ್ತಾನೆ.

**ತಂ ಶ್ರೋಣಿತ ಪರೀತಾಂಗಂ ಪ್ರೇಷ್ಟಮಾನಂ ಮಹೀತಲೇ ।**
**ಭಾರ್ಯಾ ತು ನಿಹಿತಂ ದೃಷ್ಟ್ವಾ ರುರಾವ ಕರುಣಂ ತದಾ॥**

(ಬಾಲಕಾಂಡ–೨–೧೧)

ನೆಲದ ಮೇಲೆ ವಿಲಿವಿಲಿ ಒದ್ದಾಡುತ್ತಿದ್ದ ಆ ಪಕ್ಷಿ ಮೈಯೆಲ್ಲಾ ರಕ್ತದಿಂದ ತುಂಬಿ ಹಾಗೇ ಮರಣವನ್ನಪ್ಪಿತು. ಇದನ್ನು ತನ್ನ ಕಣ್ಣೆದುರಿಗೇ ನಡೆಯಿತು. ಆ ಹೆಣ್ಣು



ಪಕ್ಷಿ ಗಟ್ಟಿಯಾಗಿ ಮನಕರಗುವಂತೆ ರೋದಿಸುವುದನ್ನೂ ನೋಡಿದ. ಇಲ್ಲಿ **ದ್ವಿಜಃ ನಿಶಮ್ಯ ರುದಿತಾ ಕ್ರೌಂಚೀಮಿದಂ ವಚನಮಬ್ರವೀತ್.** ರುದಿತಾಂ ಕ್ರೌಂಚೀಮ್ ಎಂದರೆ ಹೆಣ್ಣುಪಕ್ಷಿ ಎಂದು ಸ್ಪಷ್ಟವಾಗಿ ತಿಳಿಸುತ್ತಾನೆ. ಆ ದುಃಖವನ್ನು ನೋಡಿ ತಾಳಲಾರದೆ ವ್ಯಾಧನ ಕಡೆ ಕೋಪದಿಂದ ನೋಡುತ್ತಾನೆ. ಒಂದು ಕಡೆ ಕಾರುಣ್ಯದ ಪ್ರವಾಹ. ಇನ್ನೊಂದೆಡೆ ಆ ದುಷ್ಟನ ಕ್ರೌರ್ಯದಿಂದ ಉಕ್ಕಿ ಬಂದ ಕೋಪ. ತಾನೇನು ಹೇಳುತ್ತಿರುವೆನೆಂಬುದು ತನಗೇ ತಿಳಿಯದೆ ದುರಂತಕ್ಕೆ ಕಾರಣವಾದವನನ್ನು ಕೋಪದಿಂದ ನೋಡಿದಾಗ ಆಕಸ್ಮಿಕವಾಗಿ ಅವನ ಮುಖದಿಂದ ಈ ಒಂದು ನುಡಿ ಚಿಮ್ಮಿತು.

**ಮಾ ನಿಷಾದ ಪ್ರತಿಷ್ಠಾಂ ತ್ವಮಗಮ ಶಾಶ್ವತೀಃ ಸಮಾಃ ।**
**ಯತ್ಕ್ರೌಂಚ ಮಿಥುನಾದೇಕಮವಧೀಃ ಕಾಮಮೋಹಿತಮ್ ॥**

"ಹೇ ನಿಷಾದ ! ನೀನು ಹೆಚ್ಚುಕಾಲ ಬದುಕಬೇಡ. ಅತಿ ಶೀಘ್ರದಲ್ಲೇ ಮೃತನಾಗು. ಕಾಮಮೋಹಿತನಾಗಿ ಜತೆಗೂಡುವ ಕೌಂಚಪಕ್ಷಿಗಳು ಚಕ್ಕಂದವಾಗಿ ನಲಿಯುವುದನ್ನು ನೋಡಿ ಅವುಗಳಿಗೆ ವಿಘ್ನವಾಗಿ ಒಂದನ್ನು ಕೊಂದೆಯಲ್ಲಾ ! ಅದರಂತೇ ನಿನಗೂ ಇದೇ ರೀತಿ ಸಾವು ಬರಲಿ." ಎಂದು ಗಟ್ಟಿಯಾಗಿ ಹೇಳಿದ. ಆ ವಾಲ್ಮೀಕಿಯ ಮನೊವೇದನೆ ಈ ಶ್ಲೋಕದಿಂದ ತಿಳಿದು ಬರುತ್ತದೆ. ತಾನು ಏನೂ ಅಂದುಕೊಳ್ಳದೆ ಆಡಿದ ಮಾತುಗಳು ಕೇವಲ ವಾಕ್ಯಗಳ ಸಾಲಾಗಿರಲಿಲ್ಲ. ಶೋಕಾರ್ತನಾಗಿ ಆಡಿದ ಮಾತುಗಳು ಒಂದು ಪದ್ಯ-ಶ್ಲೋಕವೆಂದೇ ತಿಳಿಯಲಾಯಿತು. **ಶ್ಲೋಕಃ ಶೋಕದ್ಯಮಾಗತಃ**

ವಾಲ್ಮೀಕಿಗೆ ಎಚ್ಚರವಾಯಿತು. ಚಿಂತೆಗೊಳಗಾದ. ಏನು ಆಡಿಬಿಟ್ಟೆ ನಾನು ! ಆರ್ತನಾದದಿಂದ ಕೊರಗುವ ಹಕ್ಕಿಯ ಮೇಲೇ ಅನುಕಂಪ. ಆದರೆ ಬೇಡನನ್ನು ಶಪಿಸಬೇಕೆಂಬಷ್ಟು ಕೋಪವಿದ್ದಿಲ್ಲ. ಆದರೂ ಬೇಡನ ಮೇಲಿನ ಕೋಪ ಬೇರೊಂದು ರೂಪ ತೆಗೆದು ಶ್ಲೋಕವೇ ಆಯಿತೋ ಹೇಗೆ ? ಆಕಸ್ಮಾತ್ತಾಗಿ ನಾನು ಆಡಿದ ಮಾತುಗಳು ಒಂದು ಪದ್ಯರೂಪದಲ್ಲಿ ಹೊರಬಂದಿದೆ. ಇದೂ ಸಹ ಒಂದು ಪದ್ಯವು ಶ್ಲೋಕರೂಪದಿಂದ ಬಂದು ಅನುಷ್ಟುಪ್ ಛಂದಸ್ಸಿನ ನಿರ್ಮಾಣವಾಯಿತು.

ಈವರೆಗೂ ಸಂಸ್ಕೃತ ಸಾಹಿತ್ಯದಲ್ಲಿ ಇಂಥಾ ಛಂದಸ್ಸು ಬಳಸಿದಂತೆ ಕಾಣುವುದಿಲ್ಲವೆಂದಲ್ಲ. ವೇದಗಳಲ್ಲಿ ಕಂಡು ಬರುವುದು. ಆದರೆ ಪದ್ಯಗಳಲ್ಲಿ ಪ್ರಯೋಗ ಅಷ್ಟು ವ್ಯಾಪಕವಾಗಿ ಪ್ರಚಲಿತವಾಗಿದ್ದಿಲ್ಲ. ಅನುಷ್ಟುಪ್ ಛಂದಸ್ಸು ಎಂದರೇನು ?

ಶ್ಲೋಕದಲ್ಲಿ ಎರಡು ಸಾಲುಗಳು ದ್ವಿಪದಿ ಅಂತ. ಒಂದೊಂದು ಸಾಲಿನಲ್ಲೂ ಎಂಟು ಅಕ್ಷರಗಳು. ಒಟ್ಟು ೧೬ ಅಕ್ಷರಗಳು. ಇದನ್ನೇ ಅನುಷ್ಟುಪ್ ಛಂದಸ್ಸು ಎನ್ನುತ್ತಾರೆ. ಈ ಛಂದಸ್ಸು ಅತಿ ಸುಲಭದಲ್ಲಿ ಪ್ರಯೋಗಿಸಲ್ಪಟ್ಟಿರುತ್ತೆ. ಕಾಳಿದಾಸನು ರಘುವಂಶವೆಂಬ ಕಾವ್ಯದ ಆರಂಭದಲ್ಲಿ

**ವಾಗಾರ್ಥಾವಿವ ಸಂಪೃಕ್ತೌ ವಾಗರ್ಥ ಪ್ರತಿಪತ್ತಯೇ ।**
**ಜಗತಃ ಪಿತರೌ ವಂದೇ ಪಾರ್ವತೀ ಪರಮೇಶ್ವರೌ ॥**

ಎಂಬುದಾಗಿ ಪ್ರಯೋಗವಿದೆ.

**ಸೂತ್ರ ಶ್ಲೋಕೇ ಷಷ್ಠಂ ಗುರುಜ್ಞೇಯಂಸರ್ವತ್ರ ಲಘು ಪಂಚಕಮಾ।**
**ದೀರ್ಘತುಃ ಪಾದಯೋಹ್ರಶ್ಯಂ ಸಪ್ತಮೇ ದೀರ್ಘಮನ್ವಯೋಃ ॥**

ವಾಲ್ಮೀಕಿಯ ಶ್ಲೋಕದಲ್ಲಿ ಲಯವು ವ್ಯಾಪಕವಾಗಿದೆ. ಹೊಸತನವನ್ನು ಹೊರತಂದಿದೆ. ವಾಲ್ಮೀಕಿಗೇ ಆಶ್ಚರ್ಯ ! ತನ್ನ ಬಾಯಿಂದ ಹೊರಟ ವಾಕ್ಯ ಪದ್ಯವಾಯಿತು. ಪದ್ಯ ಶ್ಲೋಕವಾಗಿ ರೂಪುಗೊಂಡಿತು. ತನಗೇ ತಿಳಿಯದೆ ಜಗತ್ತಿಗೆ ಒಂದು ಹೊಸ ಛಂದಸ್ಸನ್ನು ಕೊಟ್ಟ.

**ಶೋಕಾರ್ತಸ್ಯ ಪ್ರವೃತ್ತೋಮೇ ಶ್ಲೋಕೋ ಭವತು ನಾನ್ಯಥಾ.**

ವಾಲ್ಮೀಕಿಯ ಬಳಿ ಆಗ ಶಿಷ್ಯನಾದ ಭಾರದ್ವಾಜನಿದ್ದ. ಶ್ಲೋಕವನ್ನೂ ಕೇಳಿದ್ದ. ಆಶ್ಚರ್ಯವಾಯಿತು. ಅದನ್ನೇ ಮೆಲುಕು ಹಾಕುತ್ತಾ ಆಶ್ರಮಕ್ಕೆ ಹಿಂತಿರುಗಿದ. ಮನಸ್ಸಿನಲ್ಲಿ ಅದೇ ಗುಂಗು. ಸಮಾಧಾನವಿಲ್ಲ. ಶಿಷ್ಯನಾದ ಭಾರದ್ವಾಜನನ್ನು ಕರೆದು ಭಾರದ್ವಾಜಾ! ನನ್ನ ಶ್ಲೋಕವನ್ನು ಕೇಳಿದೆಯಾ? ಕೇಳಿದ್ದೇ ಆದರೆ ಪುನಃ ಹೇಳು. ಶಿಷ್ಯನು ಅದೇ ಶ್ಲೋಕವನ್ನು ಪುನಃ ಉಚ್ಛರಿಸುತ್ತಾನೆ. ಅಲ್ಲಾ ನಾನ್ಯಾಕೆ ಶಾಪ ಕೊಟ್ಟೆ? ಹಾಗೆ ಕೊಡಬೇಕಾದರೆ ಕೋಪ ಬಂದಿರಬೇಕು–ಕೋಪದಿಂದ ನಾನು ಈವರೆಗೂ ಸಂಚಿತವಾಗಿದ್ದ ತಪಸ್ಸು ಕೆಟ್ಟಿತಲ್ಲಾ. ಇಷ್ಟೊಂದು ವರ್ಷಗಳ ಕಾಲ ಸಂಪಾದಿಸಿದ ಬ್ರಹ್ಮತೇಜಸ್ಸು ಯಃಕಃಚಿತ್ ಒಬ್ಬ ವ್ಯಾಧನ ಮೇಲೆ ಪ್ರಯೋಗಿಸಿ ಹಾಳುಮಾಡಿದಂತಾಯಿತು. ಹಾಗೆ ಮಾಡಬಾರದಿತ್ತು–ಆದರೆ ವಾಲ್ಮೀಕಿಗೆ ಅದರ ಬಗ್ಗೆ ಅರಿವೇ ಇಲ್ಲದಂತೆ ಘಟನೆ ನಡೆದು ಹೋಯಿತು.

**''ಕಿಮಿದಂ ವ್ಯಾಹೃತಂ ಮಯಾ''** ಆಡಿಬಿಟ್ಟೆ. ಆದರೆ ನನ್ನ ಮನಸ್ಸೆಲ್ಲಾ ಆ ಕಾರುಣ್ಯದ ಅನುಕಂಪವಾಗಿ ಪರಿಣಮಿಸಿತು. ಹಕ್ಕಿಯ ಮೇಲಿನ ಅನುಕಂಪ ವ್ಯಾಧನ ಕಡೆತಿರುಗಿತು. ಅದೇ ರೂಪಾಂತರಗೊಂಡು ವಾಕ್ಯವಾಯಿತು.ಅದೂ ಸಹ ಪದ್ಯರೂಪದಲ್ಲಿ ಹೊರಟಿತು.ಅದೇ ರಾಮಾಯಣ ಕಾವ್ಯಕ್ಕೆ ನಾಂದಿಯಾಗಿ ಪ್ರಥಮ ಶ್ಲೋಕವಾಯಿತು. ಇದೇ ವಾಲ್ಮೀಕಿಯ ಕೀರ್ತಿಗೆ ಆದಿಪತಾಕೆಯಾಯಿತು.

ಇಲ್ಲಿ ವಾಲ್ಮೀಕಿಯು ರಾಮಾಯಣದ ಪ್ರಥಮಶ್ಲೋಕ ಶೋಕದಿಂದ ರೂಪುಗೊಂಡಿತು.

**ಮಾ ನಿಷಾದ ಪ್ರತಿಷ್ಠಾಂ ತ್ವಮಗಮ ಶಾಶ್ವತೀಃ ಸಮಾಃ ।**
**ಯತ್ ಕ್ರೌಂಚ ಮಿಥುನಾದೇಕಮವಧೀಃ ಕಾಮಮೋಹಿತಮ್॥**



ಹೀಗೆ ಧ್ಯಾನಿಸುತ್ತಾ ಅಂತರ್ಮುಖಿಯಾದ. ಹಿಂದಿನ ಇದೇ ಶ್ಲೋಕ ಈಗ ಆ ಬಿರುಸು ಇಲ್ಲ. ಸಿಟ್ಟು ಇಲ್ಲ. ಆದರೆ ಈ ಪದ್ಯದಿಂದ ಇನ್ನೊಂದು ವ್ಯಾಖ್ಯಾನ ಆಧ್ಯಾತ್ಮಿಕ ಅರ್ಥ ತಿಳಿಸುತ್ತದೆ.

**ಮಾ ನಿಷಾದ** – ಲಕ್ಷ್ಮೀರಮಣನಾದ ನಾರಾಯಣ. ಮಾ ಎಂದರೆ ಲಕ್ಷ್ಮೀದೇವಿ ( ಲಕ್ಷ್ಮೀ, ಪದ್ಮಾಲಯಾ, ಪದ್ಮಾ, ಕಮಲಾ, ಶ್ರೀಹರಿಪ್ರಿಯಾ, ಇಂದಿರಾ, ಲೋಕಮಾತಾ, **ಮಾ,** ರಮಾ, ಮಂಗಳದೇವತಾ–ಎಂಬ ಅಮರಕೋಶದಲ್ಲಿ **ಮಾ** ಎಂಬುದನ್ನು ಲಕ್ಷ್ಮೀದೇವಿಯೆಂದು ಕರೆಯಲಾಗಿದೆ.). ಯಾರ ಎಡ ತೊಡೆಯ ಮೇಲೆ ಕುಳಿತಿರುತ್ತಾಳೋ ಅವನು ನಿಷಾದನು. ಶ್ರೀರಾಮಚಂದ್ರನಾದ (ನಾರಾಯಣನ ಅವತಾರ).

**ವಿವರಣೆ :–** ಹೇ ನಿಷಾದನೇ ! ( ಶ್ರೀರಾಮನೇ) ನಿನ್ನ ಯಶಸ್ಸು ಯಾವಾಗಲೂ ಶಾಶ್ವತವಾಗಿರಲಿ. ಏಕೆಂದರೆ ಕಾಮಮೋಹಿತವಾದ ಕ್ರೌಂಚಪಕ್ಷಿಗಳಲ್ಲಿ ಒಂದನ್ನು ಕೊಂದೆಯಲ್ಲಾ. (ಕ್ರೌಂಚವೆಂದರೆ–ಕುಟಿಲ ಗತಿಯಾದ, ಕ್ರೂರಿ, ಕೆಟ್ಟ ದುಷ್ಟ ಮಾರ್ಗರತನಾದ ರಾಕ್ಷಸನಾದ ರಾವಣನನ್ನು ಸಂಹರಿಸಿದೆ. ಇವನು ಪರಸ್ತ್ರೀಯರಲ್ಲೇ ಮೋಹಿತನಾಗಿದ್ದ ರಾವಣನನ್ನು ಕೊಂದೆ. ಇಂತಹ ಯಶಸ್ಕರವಾದ ಕಾರ್ಯದಿಂದ, ದುಷ್ಟ ದುರ್ಮಾರ್ಗರಿಂದ ಜಗತ್ತು ವಿಮೋಚನೆಯಾಯಿತು. ಇದನ್ನು ಹೇಗೆ ತಾನೇ ಮರೆಯಲಾದೀತು? ಶಾಶ್ವತೀ ಸಮಾಃ ಎಂದರೆ ಅನಂತಾನಂತ ವರ್ಷಗಳು ನಿರಂತರವಾಗಿ ಎಂಬ ಧ್ವನಿ ಇದೆ.

ಇದರಿಂದ ಸಂಪೂರ್ಣ ರಾಮಾಯಣ ಅಂಕುರರೂಪ, ಪದ್ಯ ಸುಂದರವಾಗಿ ಹೊರಬಂದಿತು. ರಾಮಾಯಣ ರಾಮ ಸೀತೆಯರ ಕಥೆ ಒಂದೊಂದಾಗಿ ಕಾಂಡದಿಂದ ಕಾಂಡಕ್ಕೆ ಬೆಳೆಯಿತು. ಹೀಗೆ ೨೪ ಸಾವಿರ ಶ್ಲೋಕಗಳ ರಾಮಾಯಣ ನಿರ್ಮಾಣವಾಯಿತು.

ಎರಡನೆ ಕಂತು

**ಶ್ರೀಸೀತಾಪತಿ ಶ್ರೀರಾಮಚಂದ್ರಾಯನಮಃ**

ಆದರೆ ಈಗ ರಾಮಾಯಣದ ಕೆಲ ಅಂಶಗಳನ್ನು ಕಾವ್ಯದ ಅಂತರಂಗ ವಿಷಯಗಳನ್ನು ತಿಳಿಸಲು (In between the lines) ಪ್ರಯತ್ನ ಮಾಡಲಾಗಿದೆ. ವಾಲ್ಮೀಕಿ ರಾಮಾಯಣ ಬರೆಯಲು ಪ್ರೇರೇಪಿಸಿದವರು ಬೇಡನ ಪಾತ್ರ – ದಶರಥ ರಾಜನ ಭಾರ ವೈಶಿಷ್ಟ್ಯತೆ ಪ್ರಜಾಪಾಲತೆ ಮಡದಿಯರು ಮಗ ಪಾಯಸ ಹಂಚುವಿಕೆ ರಾಮನ ಅವತಾರ.

ವಿಶ್ವಾಮಿತ್ರರ ಆಗಮನ ರಾಮಲಕ್ಷ್ಮಣರ ದುಷ್ಟ ನಿಗ್ರಹ ಅಹಲ್ಯಾಮೋಚನೆ ಸೀತಾದೇವಿಯ ಜನ್ಮವೃತ್ತಾಂತ ಶಿವಧನಸ್ಸು ಶೀತಾಪರಿಣಯ ಪರಶುರಾಮರ ಆಗಮನದೊಂದಿಗೆ ಅಯೋಧ್ಯಾ ಗಮನದ ಪರ್ಯಂತ ಸಂಕ್ಷೇಪ ವಿವರಣೆ ಇದೆ.

## ಬೇಡನು ನೀಡಿದ ಮಹೋನ್ನತ ಕಾಣಿಕೆ

ಬೇಡನು ಅವನ ನಿಜ ಸ್ವರೂಪ ಏನೇ ಇರಲಿ ಆದರೆ ಇಂತಹ ಮಹಾಕಾವ್ಯವನ್ನು ಬರೆಯಲು ಮುಖ್ಯ ಪ್ರೇರಣೆ ಅವನಿಂದಲೇ. ವಾಲ್ಮೀಕಿಯು ಮಲಗಿದ್ದ ಎಚ್ಚರಿಸಿದ ವ್ಯಕ್ತಿ. ಸುಪ್ರಜ್ಞೆಯನ್ನು ತಂದ. ಆ ಕ್ರೌಂಚಪಕ್ಷಿಯನ್ನು ಆತನು ಬಲಿ ತೆಗೆದುಕೊಳ್ಳದಿದ್ದಲ್ಲಿ ಪ್ರಾಯಶಃ ಮಾನವ ಜನಾಂಗಕ್ಕೆ ಜಗತ್ತಿಗೇ ಈ ಮೇರುಕೃತಿ ಲಬ್ಧವಾಗುತ್ತಿರಲಿಲ್ಲ. ಆ ಹಕ್ಕಿಯು ಮರಣದ ಕಾರಣದಿಂದಾಗಿ ಮಹಾಕಾವ್ಯ ಆದಿಕಾವ್ಯ ಅರುಣೋದಯವಾಯಿತು. ಇಂತಹ ಜಗದ್ವಿಖ್ಯಾತ ಕವಿ ವಾಲ್ಮೀಕಿಯನ್ನು ನಮಗೆ ಪ್ರಸಾದಿಸಿದ ಬೇಡನು ಪ್ರಣ್ಯಭಾಗಿ ಆಗಿರಬೇಕು. ಆತನ ಪುಣ್ಯದಿಂದಾಗಿ ಲೋಕಕ್ಕೆ ಸಂಸ್ಕೃತದಲ್ಲಿ ಒಂದು ನವೀನ ಛಂದಸ್ಸು – ಲಯ, ಗತಿ, ಪ್ರಾಸರೂಪವಾಗಿ ಹೊರಚಿಮ್ಮಿತು.

ವಾಲ್ಮೀಕಿ ಆದ ಬೇಡನ ಉಪಕಾರವನ್ನು ಈ ರೀತಿ ಸ್ಮರಿಸುತ್ತಾನೆ. **"ಕೃತ್ಸ್ನಂ ರಾಮಾಯಣಂ ಕಾವ್ಯಮೀದೃಶೈಃ ಕರವಾಣ್ಯಹಮ್"** ಹೇಳಿಕೊಂಡಿದ್ದಾನೆ. ಇದು ಛಂದಸ್ಸಿನ ಒಂದು ಮಾದರಿಯಾಗಿ ರಾಮಾಯಣ ರಚನೆ ಆಗುತ್ತೆ ಅಂತ.

**ವಿಶೇಷ ವಿಚಾರ :** ವಾಲ್ಮೀಕಿ ಬೇಡನಲ್ಲಿ ಕುಪಿತನಾಗಿ ಅವನು ಅಮಾಯಕ ಪಕ್ಷಿಗಳನ್ನು ಕೊಂದದ್ದರಿಂದ ಅನುಕಂಪದಿಂದ ಶಾಪ ಕೊಟ್ಟರು.

ಆದರೆ ಬೇಡನು ಕೇಳುತ್ತಾನೆ. ಹೇ ಋಷಿವರ್ಯ ನನಗೆ ಶಾಪ ಕೊಡಲು ನಿಮಗೆ ಏನು ಅಧಿಕಾರವಿದೆ ? You have no right to punish me or curse me for, what is your previous history ? back. ನಿಮ್ಮ ಹಿಂದಿನ ರೂಪ ಎಂಥಾದ್ದಾಗಿತ್ತು. ನನ್ನಂತೆಯೇ ನೀವೂ ಸಹ ಕ್ರೂರಿಗಳೇ ಆಗಿ ಅನೇಕರನ್ನು ಹಿಂಸಿಸಿ ಕೊಂದು ಜೀವನ ಸಾಗಿಸುತ್ತಿದ್ದೀರಿ ಅಲ್ಲವೇ ? ಅಂತೆಯೇ ನಾನು ನನ್ನ ಕುಲಧರ್ಮಕ್ಕೆ ಅನುಗುಣವಾಗಿ ನನ್ನ ವೃತ್ತಿಯಿಂದಾಗಿ ಪಕ್ಷಿಯ ಮಾಂಸವೇ ಆಹಾರ. ತಸ್ಮಾತ್ ಕೊಂದೆ.



ಆಶ್ಚರ್ಯವೆಂದರೆ ಈಗ ನಿಮಗೆ ಕಾರುಣ್ಯ ಅನುಕಂಪ ಬಂದಿತು. ಹಿಂದಿನದು ಎಲ್ಲಿ ಹೋಗಿತ್ತು ? ನಿರ್ದಾಕ್ಷಿಣ್ಯವಾಗಿ ಪೀಡಿಸಿ ಸಂಪಾದಿಸಿದ ದ್ರವ್ಯವನ್ನು ತಿನ್ನುತ್ತಿದ್ದೀರಲ್ಲಾ ? ಎಂತಹ ವಿಪರ್ಯಾಸ ? ಅಂತ ಪ್ರಶ್ನೆ ಮಾಡುತ್ತೇನೆಂದು ಭಾವಿಸೋಣ. ವಾಲ್ಮೀಕಿ ಋಷಿಗಳಿ ಇದಕ್ಕೆ ಸಮಾಧಾನ ಕೊಡುತ್ತಾರೆ. ಹೇ ವ್ಯಾಧನೇ ಕೇಳು. ನಾನು ಹಿಂದಿನ ಜನ್ಮದಲ್ಲಿ ವ್ಯಾಧನಾಗಿ ಅನೇಕ ಪಾಪಿಷ್ಟ ಕ್ರೂರ ಕಾರ್ಯಗಳನ್ನು ಮಾಡಿದ್ದೇನೆ ನಿಜ. ಆದರೆ ನಾನು ಜನ್ಮತಃ ಕ್ರೂರಿಯಲ್ಲ. ವ್ಯಾಧನಾದೆ. ಯಾವುದೋ ದೈವ ಸಂಕಲ್ಪದಿಂದಾಗಿ ಹಾಗೆ ಮಾಡಿದೆ. ಜ್ಞಾನಿಗಳ ಉಪದೇಶದಿಂದ ಪರಿವರ್ತನೆ ಆಯಿತು. ವ್ಯಾಧನಾಗಿದ್ದ ನಾನು ಪಾಪ ಪ್ರಾಯಶ್ಚಿತ್ತ ರೂಪ ತಪಸ್ಸು ಮಾಡಿದೆ. ನಿಜ ಸಂಗತಿ ಜ್ಞಾನ ಲಭ್ಯವಾಯಿತು. ಮುನಿಯಾದೆ. ವಾಲ್ಮೀಕಿ ಎಂದಾದೆ. ಈಗ ಆ ಹಿಂದಿನ ಕ್ರೈರ್ಯವಾಗಲಿ ನಿರ್ದಾಕ್ಷಣ್ಯತೆ ಆಗಲಿ ನಶಿಸಿದೆ. ತಪೋಜೀವನದಿಂದ ಮಾನವರಷ್ಟೇ ಅಲ್ಲ ಪಕ್ಷಿ ಮೃಗಗಳಲ್ಲಿ ಅನುಕಂಪ ಪ್ರೇಮ ಉದ್ಭವಿಸಿದೆ. ಆದ್ದರಿಂದ ನೀನು ಮಾಡಿದ ಕ್ರೂರ ಕಾರ್ಯವು ನನ್ನ ಮನವನ್ನು ಕಲಕಿತು. ಇಂತಹ ಪರಿವರ್ತನೆಯಾಗಲಿ ದಯೆಯಾಗಲಿ ನಿನಗೆ ಬಂದಿದೆಯಾ ಹೇಳು. ಆದ್ದರಿಂದ ನೀನು ಶಾಪಾರ್ಹನಾಗಿರುವೆ ಅಂತ ತಿಳಿಸಿದರು.

## ರಾಮಾಯಣ ರಚನೆ

ಈ ಕೃತಿಯನ್ನು ಯಾಕೆ ರಚಿಸಿದೆನು ಅನ್ನುವುದಕ್ಕೆ ವಾಲ್ಮೀಕಿಯೇ ವಿವರಿಸುತ್ತಾನೆ.

ತಪಃ ಸ್ವಾಧ್ಯಾಯನಿರತಂ ತಪಶ್ವೀ ವಾಗ್ವಿದಾಂವರಂ ವರಮ್ ।
ನಾರದಂ ಪರಿಪಪ್ರಚ್ಛ ವಾಲ್ಮೀಕಿಮುನಿ ಪುಂಗವಮ್ ॥

ಮತ್ಸ್ಯಪುರಾಣದಲ್ಲಿ ಶತಕೋಟಿ ವಿಸ್ತುತವಾದ ರಾಮಾಯಣವಿದ್ದಿತು. ಇದನ್ನು ಬ್ರಹ್ಮದೇವರು ಬರೆದರೆಂದು ಅದನ್ನು ನಾರದರಿಗೆ ಬೋಧಿಸಿ ಮುಂದೆ ಲೋಕದಲ್ಲಿ ಸಂಕ್ಷೇಪವಾಗಿ ಪ್ರಕಟಿಸಿ ಪ್ರಸಾರ ಮಾಡುವುದಾಗಿ ನಾರದರು ವಾಲ್ಮೀಕಿ ಮುನಿಗಳ ಬಳಿಗೆ ಬಂದರು ಎಂದು ವಿವರವಿದೆ.

ವಾಲ್ಮೀಕಿಯು ಹಿಂದೆ ವ್ಯಾಧನಾಗಿದ್ದಾಗ ಇದೇ ನಾರದರಿಂದ ಪ್ರಶ್ನೆ ಉಪದೇಶದಿಂದಾಗಿ ಪ್ರಾಜ್ಞನಾದರು. ಆಗ ನಾರದರು, ಹೇ ವ್ಯಾಧ ನಿನ್ನಲ್ಲಿ ಪರಿವರ್ತನೆ ಬಂದಿದೆ. ನಿನ್ನ ನಿಜ ಸ್ವರೂಪವೇನೆಂದು ತಿಳಿಯಲು ರಾಮ ನಾಮವನ್ನು ಜಪಿಸು. ಜ್ಞಾನೋದಯವಾಗುವುದು ಎಂದು ಹೇಳಿದ್ದರು. ಅಂತೆಯೇ ವಾಲ್ಮೀಕಿ ಮಹರ್ಷಿಗಳು ತಪಸ್ಸು ರಾಮನಾಮ ಜಪವನ್ನು ಮಾಡಿ ಸಿದ್ಧಿ ಹೊಂದಿದ ಫಲವಾಗಿ ಮುಂದೆ ರಾಮಾಯಣವನ್ನು ಬರೆಯುವ ಸಾಮರ್ಥ್ಯವನ್ನು ಪಡೆದುಕೊಂಡರು.

ಇಲ್ಲಿ ಒಂದು ವಿಷಯ ಭಾರತೀಯ ಸತ್ಸಂಪ್ರದಾಯವನ್ನು ಜ್ಞಾಪಕಕ್ಕೆ ತಂದುಕೊಳ್ಳಬೇಕು. ಯಾವುದೇ ಬ್ರಹ್ಮಜ್ಞಾನ ಪಡೆಯಲು ಗುರುಗಳ ಉಪದೇಶದಿಂದಲೇ ಸಾಧ್ಯವಾಗುವುದು ವಿದ್ಯೆ. **ತದ್ವಿಜ್ಞಾನಾರ್ಥಂ ಸಗುರುಮೇಭಿಗಚ್ಛೇತ್ ಸಮಿತ್ಪಾಣಿಃ**

**ಶ್ರೋತ್ರಿಯಂ ಬ್ರಹ್ಮನಿಷ್ಠಂ ॥** ಇಂತಹ ವಿದ್ಯೆಯನ್ನು ಬೋಧಿಸಲು ಮೊಟ್ಟಮೊದಲಿಗೆ ನಾರದರು ವಾಲ್ಮೀಕಿ ಆಶ್ರಮಕ್ಕೆ ಬಂದು ತಿಳಿಸುತ್ತಾರೆ – ರಾಮಾಯಣವನ್ನು ರಚಿಸಿರಿ ಎಂಬುದಾಗಿ.

ವಾಲ್ಮೀಕಿಗೆ ರಾಮ ಚರಿತ್ರೆ ಬಗ್ಗೆ ತಿಳಿದಿತ್ತು. ಆದರೂ ಗುರು ಅನುಗ್ರಹದಿಂದಲೇ ಸಾಧ್ಯವಾಗಬೇಕಿದ್ದಿತು. ಆ ಉದ್ದೇಶದಿಂದ ಬ್ರಹ್ಮದೇವರ ಆಜ್ಞಾರೀತ್ಯಾ ಸಿದ್ಧರಾದ ವಾಲ್ಮೀಕಿಯಲ್ಲಿ ಬಂದರು – **ತಪಃ ಸ್ವಾಧ್ಯಾಯ ನಿರತಂ ತಪಶ್ವೀವಾಗ್ವಿದಾಂ ವರಮ್ । ನಾರದಂ ಪರಿಪಪ್ರಚ್ಛ ವಾಲ್ಮೀಕಿ ಮುನಿ ಪುಂಗವಮ್ ॥** ಇಲ್ಲಿಂದ ರಾಮಾಯಣ ಕಥಾ ಪ್ರಾರಂಭವಾಗುತ್ತೆ. ರಾಮಾಯಣದ ಮೊದಲ ಶ್ಲೋಕವೇ ಇದು.

ರಾಮನಾಮ ಜಪದಲ್ಲಿ ಮಗ್ನರಾಗಿದ್ದರು. ಇದಕ್ಕೆ ಪೋಷಕರಾಗಿ ಕ್ರೌಂಚ ಪಕ್ಷಿಗಳಿಂದ ಸನ್ನಿವೇಶ. ಸಮಾಧಿಯಲ್ಲಿ ಕುಳಿತಿದ್ದರು. ಆಗ ನಾರದರು ಆಶ್ರಮಕ್ಕೆ ಆಗಮಿಸಿದರು. ವಾಲ್ಮೀಕಿಗೆ ಅತ್ಯಾನಂದವಾಯಿತು. ಇಂತಹ ಮಹಾನ್ ದೇವಋಷಿಗಳ ಆಗಮನದಿಂದ ಪುಲಕಾಂಕಿತರಾದರು. ಸ್ವಾಗತ ಬಯಸಿ ಪಾದ್ಯ ಆಚಮನ ದಿವ್ಯ ಆಸನ ಕೊಟ್ಟು ಪ್ರಶ್ನೆ ಮಾಡುತ್ತಾರೆ. ವಾಲ್ಮೀಕಿಯ ತಪಸ್ಸು ಅಂದರೆ ಸದಾ ರಾಮ ಚಿಂತನೆ ಸ್ವಾಧ್ಯಾಯ ಅದಕ್ಕೆ ಪೂರ್ವಿಭಾವಿಯಾಗಿ ಅಧ್ಯಯನ ಇಂತಹ ಸಮಯದಲ್ಲಿ **"ವಾಗ್ವಿದಾಂವರ"** ಎಂದಿದೆ. ನಾರದರು ಮಾತುಗಾರರು. ಅಂದರೆ ಗೊಡ್ಡು ಹರಟೆ ಹೊಡೆಯುವವರಲ್ಲ **ನಾರಂ ಜ್ಞಾನಂ ದದಾತೀತಿನಾರದಃ** ಎಂಬಂತೆ ಜ್ಞಾನಪ್ರದರು. ಅಂತಹಾ ತತ್ವಜ್ಞಾನ ಬ್ರಹ್ಮಜ್ಞಾನ ಕೊಡುವವರು ಎಂದರ್ಥ. ಶ್ರೇಷ್ಠ ಮಾತನ್ನಾಡಿ ಪರಿವರ್ತನೆ ಅಥವಾ ಹೊಸಚೇತನವನ್ನು ನೀಡುವವರು. ಅಂಥಾ ಶ್ರೇಷ್ಠ ಜ್ಞಾನಿಗಳು ಬಂದಾಗ ಏನು ಕೇಳಿದರೆ ಅದರಿಂದ ಯೋಗ್ಯ. ಉತ್ತಮ ಬರುವುದೋ ಅಂಥ. ಲೋಕ ಕಲ್ಯಾಣಕ್ಕೆ ತಕ್ಕ ಉತ್ತರವನ್ನು ಬಯಸಿ ವಾಲ್ಮೀಕಿಗಳು ಪ್ರಶ್ನಿಸುತ್ತಾರೆ. ಇಲ್ಲಿ **"ಪರಿಪಪ್ರಚ್ಛೆ"** ಎಂದಿದೆ. ಪರಿಪರಿಯಾಗಿ ಮತ್ತೆಮತ್ತೆ ಚೆನ್ನಾಗಿ ಶ್ರದ್ಧಾನ್ವಿತರಾಗಿ ಹೇಳಿದರು. ಇಲ್ಲಿ ವಿನಯಭಾವವಿದೆ. ನನಗೆಲ್ಲ ಗೊತ್ತಿದೆ ಅನ್ನುವ ಅಹಂ ಇಲ್ಲ ಎಂಬುದನ್ನು ಕಾಣಬೇಕು.

ಹೇ ನಾರದರೆ ನನಗೆ ಜಿಜ್ಞಾಸಾ ಇದೆ. ಅದಕ್ಕೆ ಸೂಕ್ತ ಸಮಾಧಾನ ಕೊಡಿರಿ. ಏನದು ? **"ಕೊನ್ಯ ಸ್ಮಿನ್ ಸಾಂಪ್ರತಂ ಲೋಕೇ ಗುಣವಾನ್ ಕಶ್ಚ ವೀರ್ಯವಾನ್ ಕಶ್ಚ ವೀರ್ಯವಾನ್ । ಧರ್ಮಜ್ಞಶ್ಚ ಕೃತಜ್ಞಶ್ಚ ಸತ್ಯವಾಕೋ ದೃಢವೃತಃ । ಚರಿತ್ರೇಣ ಚಕೋ ಯುಕ್ತಃ ಸರ್ವ ಭೂತೇಷು ಕೋಹಿತಃ । ವಿದ್ವಾನ್ ಕಃ ಕಃ ಸಮರ್ಥಶ್ಚ ಕಶ್ವೈಕಪ್ರಿಯದರ್ಶನಃ ॥ ಆತ್ಮವಾನ್ಕೋ ಜಿತಕ್ರೋಧೋ ಧೃತಿಮಾನ್ ಕೋಽನಸೂಯಕಃ। ಕಶ್ಚ ಬಿಭರ್ತಿ ದೇವಾಶ್ಚ ಜಾತರೋಷಸ್ಯಸಂಯುಗೆ।"**

ಹೇ ಋಷಿಪುಂಗವರೇ ಈ ಜಗತ್ತಿನಲ್ಲಿ ಯಾವ ಪುರುಷನು ಗುಣಪೂರ್ಣನು, ವೀರನು, ಧರ್ಮವನ್ನು ಅರಿತವನು, ಕೃತಜ್ಞತೆ ಸತ್ಯವಾದಿಯು ದೃಢಸಂಕಲ್ಪನು



ಯಾರಾದರೆ ಸದಾಚಾರ ನಿಷ್ಠಾವಂತನು ಸಮಸ್ತ ಪ್ರಾಣಿಗಳಿಗೆ ಹಿತವನ್ನು ಬಯಸುತ್ತಾನೆ. ವಿದ್ವಾಂಸನೂ (ಶಾಸ್ತ್ರವೇತ್ತನೂ) ಕಾರ್ಯದಕ್ಷತೆ ಜನರು ಈತನನ್ನು ನೋಡಿದಾಕ್ಷಣ ಆನಂದಪಡುತ್ತಾರೆ. ಧೈರ್ಯಶಾಲಿ ಹಾಗೇ ಕ್ರೋಧವನ್ನಾಗಿದ್ದವನು ಕಾಂತಿಯುಕ್ತನು ಅಸೂಯೆ ರಹಿತನು ರಣದಲ್ಲಿ ನಿಂತರೆ ದೇವತೆಗಳೂ ನಡುಗುತ್ತಾರೆ ಇಷ್ಟೊಂದು ೧೭ ಗುಣಗಳುಳ್ಳ ಪುರುಷನು ಇದ್ದಾನೆಯೇ? ನೀವು ಮಹರ್ಷಿಗಳು ತ್ರಿಲೋಕ ಸಂಚಾರಿಗಳು ನಿಮಗೆ ತಿಳಿದಿದ್ದೇ ಆದರೆ ನನಗೆ ವಿವರಿಸಿರಿ ಎಂದು ಬೇಡುತ್ತಾನೆ. ಶ್ರೀ ವಾಲ್ಮೀಕಿಗೆ ರಾಮಚಂದ್ರನ ಬಗ್ಗೆ ತಿಳಿದೇ ಇತ್ತು. ಆತನು ರಾಮಚಂದ್ರನ ರಾಜ್ಯದಲ್ಲೇ ಸ್ವತಃ ಇದ್ದನು. ರಾಮನು ಅತಿಮಾನುಷ ಲಕ್ಷಣಗಳಿಂದ ತುಂಬಿದವನೆಂದೂ ತಿಳಿದಿತ್ತು. ಇದೇ ರಾಮಚಂದ್ರನ ಮಡದಿ ಸೀತೆ ಪರಿತ್ಯಕ್ತಳಾಗಿ ತನ್ನ ಆಶ್ರಮದಲ್ಲಿ ಆಸರೆ ಹೊಂದಿದ್ದಳು. ಇಲ್ಲಿ ರಾಮನ ಸುತಧಯರಾದ ಲವಕುಶರು ಹುಟ್ಟಿದ್ದು ಇಷ್ಟೆಲ್ಲಾ ಗೊತ್ತಿದ್ದರೂ ನಾರದರನ್ನು ಪ್ರಶ್ನೆ ಮಾಡಿದರು. ಏಕೆಂದರೆ, ಇಂತಹ ಪುಣ್ಯಪುರುಷ ಇನ್ನೊಬ್ಬ ಇದ್ದಾನೆಯೇ ಹೇಗೆ ಅಥವಾ ತಾನು ತಿಳಿದ ಪುರಾಣ ಪುರುಷ ರಾಮನು ಅನ್ನುವುದನ್ನು ಸ್ಥಿರಪಡಿಸಿಕೊಳ್ಳಲು ಹಾಗೆ ಪ್ರಶ್ನೆ ಮಾಡಿದರು.

ವಾಲ್ಮೀಕಿ ಮನಸ್ಸಿನಲ್ಲಿರುವ ರಾಮನೇ ಮುಂದಿನ ಕಾವ್ಯಕ್ಕೆ ನಾಯಕನೇ ಎಂದು ತಿಳಿಸಲು ನಾರದರು ಉತ್ತರಿಸುತ್ತಾರೆ.

ವಾಲ್ಮೀಕಿ ಮುನಿಗಳೇ ನೀವು ತಿಳಿಸಿದ ಇಷ್ಟೊಂದು ಗುಣಗಳುಳ್ಳ ಪುರುಷನು ದುರ್ಲಭ. ಆದರೆ ಅಂಥಾ ಗುಣಭರಿತ ಸಂಪನ್ನನಾದ ಒಬ್ಬ ಪುರುಷನಿದ್ದಾನೆ. ಮುನಿ ಪುಂಗವರೇ ನಿಮ್ಮ ಅತಿ ಸಮೀಪದಲ್ಲೇ ಇರುತ್ತಾನೆ. ಅವನು ಇಕ್ಷ್ವಾಕು ವಂಶದಲ್ಲಿ ಹುಟ್ಟಿದ್ದಾನೆ. ಅವನೇ ಶ್ರೀರಾಮಚಂದ್ರನು. ಅವನಲ್ಲಿ ನೀವು ಅಂದುಕೊಂಡಷ್ಟು ಎಲ್ಲಾ ಗುಣಗಳು ಒಟ್ಟಾಗಿ ಕಾಣಬಹುದು.

**ಇಕ್ಷ್ವಾಕವಂಶಪ್ರಭವೋರಾಮಾನಾಮ ಜನೈಃಶೃತಃ**
**ನಿಯತಾತ್ಮ ಮಹಾವೀರ್ಯೋದ್ಯುತಿಮಾನ್ ಧೃತಮಾನ್ ವಶೀ ।(೬)**
**––––––––––**
**ಸಚಸರ್ವಗುಣೋಪೇತಃ ಕೌಸಲ್ಯಾನಂದ ವರ್ಧನಃ**
**ಸಮುದ್ರ ಯುವ ಗಾಂಭೀರ್ಯೋ ಧೈರ್ಯೇಣ ಹಿಮವಾನಿವ (೭)**
**ವಿಷ್ಣುನಾಸ ಧೃತೋ ವೀರ್ಯೋಸೋಮತ್ ಪ್ರಿಯದರ್ಶನಃ**
**–––––––––– ತಮೇವಂ ಗುಣಸಂಪನ್ನಂ**
**ರಾಮಂ ಸತ್ಯ ಪರಾಕ್ರಮಮು**

ಈ ರೀತಿಯಾದ ಗುಣಗಳುಳ್ಳವನ್ನಾದ್ದರಿಂದ ಅವನು ಸರ್ವಲೋಕಪ್ರಿಯಃ ಎಂದೆನಿಸಿಕೊಂಡಿರುತ್ತಾನೆ. ಶ್ರೀರಾಮನು ತನ್ನ ರಾಜ್ಯದಲ್ಲಿರುವ ಜನರಿಗೆ ಪ್ರೀತಿಪಾತ್ರನಷ್ಟೇ

ಅಲ್ಲ ದೇವತೆಗಳೂ ಇಡೀ ಜಗತ್ತೇ ಅವನನ್ನು ಪ್ರೀತಿಸುತ್ತದೆ ಮತ್ತು ಗೌರವಿಸುತ್ತದೆ.

ರಾಮನು ರಾಜನಾದರೂ ಸಾಧುಗುಣ ಸಂಪನ್ನ ಸದಾ ಲಘುಮುಖವುಳ್ಳ ಸಿರಿವಂತ. ಇಷ್ಟು ದೊಡ್ಡಸ್ತಿಕೆ ಅಧಿಕಾರವಿದ್ದಿತು. ಆದರೂ ಅಹಂಕಾರರಹಿತನು ಇತ್ಯಾದಿಯಾಗಿ ಗುಣಸಂಪನ್ನನು, ವಾಲ್ಮೀಕೆಯೇ ಕೇಳಿರಿ ನನಗೆ ತಿಳಿದಮಟ್ಟಿಗೆ ರಾಮನ ಹೊರತು ಬೇರೊಬ್ಬ ಪುರುಷ ಕಾಣುವುದಿಲ್ಲ. ಅವನೇ ಪುರುಷೋತ್ತಮನು. ಇಷ್ಟು ಕೇಳಿ ವಾಲ್ಮೀಕಿ ಅತ್ಯಂತ ಹರ್ಷರಾದರು. ನಾರದರನ್ನು ಬೀಳ್ಕೊಟ್ಟು ತನ್ನ ಆಶ್ರಮದಲ್ಲೆ ಶ್ರೀರಾಮನ ವ್ಯಕ್ತಿತ್ವದ ಬಗ್ಗೆ ತಲ್ಲೀನನಾಗಿ ಚಿಂತಿಸುತ್ತಿದ್ದಾಗ ಸಾಕ್ಷಾತ್ ಪರಬ್ರಹ್ಮ ದೇವರು ಪ್ರತ್ಯಕ್ಷರಾದರು. ಹೇ ಮುನಿಶ್ರೇಷ್ಠರೇ ಕೇಳಿ. ನೀವು ರಾಮಾಯಣವನ್ನು ರಚಿಸಿರಿ. ರಚಿಸಿದ ಕೃತಿಯು ಅಜರಾಮರವಾಗಿರುವುದು ಎಂದು ಆದೇಶವಿಟ್ಟರು. ದೇವೋತ್ತಮರಾದವರ ಉಪದೇಶ ಆಜ್ಞೆಯ ಆಧಾರದಿಂದಾಗಿ ವಾಲ್ಮೀಕಿಗಳು ಬರೆಯಲು ಪ್ರಾರಂಭಿಸಿದರು. **ಯಾವತ್ಸ್ಥಾಸ್ಯತಿಗಿರಯಃ ಸರಿತಶ್ಚಮಹೀತಲೇ। ತಾವದ್ರಾಮಾಯಣ ಕಥಾಲೋಕೇಷು ಪ್ರತರಿಷ್ಯತಿ॥** ರಾಮಾಯಣ ಕಾವ್ಯರಚನೆಯಾಯಿತು. ಏಳು ಕಾಂಡಗಳು ಇಪ್ಪತ್ತುನಾಲ್ಕು ಸಾವಿರ ಶ್ಲೋಕಗಳು, ಪದ್ಯದಿಂದ ಪದ್ಯ ಅಧ್ಯಾಯ, ಅಧ್ಯಾಯದಿಂದ ಕಾಂಡ ಹೀಗೆ ವಿಸ್ತಾರವಾಗಿ ಅನುಷ್ಟುಪ್ ಛಂದಸ್ಸುಗಳುಳ್ಳ ಆದಿಕಾವ್ಯವೆನಿಸಿತು. ವಾಲ್ಮೀಕಿಯ ಈ ರಾಮಾಯಣವನ್ನು ಜಗತ್ತು ಮೆಚ್ಚಿತು. ಸ್ವತಃ ವಾಲ್ಮೀಕಿಗೆ ಆನಂದವಾಯಿತು. ಸುಂದರವಾಗಿ ಬಂದಿದೆ ಅನಿಸಿತು. ಇದನ್ನು ಜಗತ್ತಿನಲ್ಲಿ ಪ್ರಚಾರ ಮಾಡಬೇಕು.

**ಆಶ್ಚರ್ಯಮಿದನೂಖ್ಯಾನಂ ಮುನಿನಾ ಸಂಪ್ರಕೀರ್ತಿತಂ॥** ನಾನು ಇಷ್ಟೆಲ್ಲಾ ರಚಿಸುವ ಸಾಮರ್ಥ್ಯ ಕೊಟ್ಟು ನನ್ನೊಳಗೆ ಶ್ರೀರಾಮನೇ ನುಡಿಸಿರಬೇಕು. ಇದು ಕೇವಲ ಕಾವ್ಯಲಹರಿ ಆಗಿರದೇ ವೇದ ಮಂತ್ರ. ಗಾಯತ್ರೀ ಮಂತ್ರ ತುಲ್ಯವಾಗಿರುವುದನ್ನು ಕಂಡು ಆನಂದಿಸಿದರು. ಕಾವ್ಯವೇನೋ ಬರದಾಯಿತು. ಆದರೆ ಶ್ರೀರಾಮಚಂದ್ರನ ಚರಿತೆ ಲೋಕಕ್ಕೆ ತಿಳಿಸಿ ಪ್ರಖ್ಯಾತಿ ಆಗುವುದಾದರೂ ಹೇಗೆ ಎಂಬುದಾಗಿ ಚಿಂತಿಸಿದ.

ನಾವಿಲ್ಲಿ ರಸಿಕರಾದರೆ ತಿಳಿಯಬೇಕಾದ್ದು ಮುಖ್ಯವಾಗಿ ಇದು ಎಂಥಾವರ ಮನಸ್ಸು ಕರಗುವಂಥಾದ್ದು ಕಾರುಣ್ಯದ ಆಲಾಪನೆ. ಭಗವಂತನಾದ ಶ್ರೀರಾಮ ಲಕ್ಷ್ಮೀಸ್ವರೂಪಳಾದ ಸೀತಾದೇವಿಯರು ಮಾನವ ಜನ್ಮ ತಾಳಿ ಮನುಷ್ಯರ ಕಷ್ಟ ಕಾರ್ಪಣ್ಯ ದುಃಖಾನುಭವ ಹಾಗೂ ರಾಜ್ಯವೈಭವಗಳ ವಿವರ ಕಾಣುತ್ತೇವೆ.

## ರಾಮಾಯಣ ಕಥಾ ಪ್ರಾರಂಭ

ಇಲ್ಲಿಯವರೆಗೆ ಉಪೋದ್ಘಾತದ ಪ್ರಥಮ ಆವೃತ್ತಿ. ಆಯಿತು. ಇನ್ನು ಮುಂದೆ ದಶರಥ ಮಹಾರಾಜನ ರಾಜ್ಯ ಅಯೋಧ್ಯೆಯ ವರ್ಣನೆಯೊಂದಿಗೆ ವಾಲ್ಮೀಕಿ ತಿಳಿಸುತ್ತಾನೆ.



ಕೋಸಲ ದೇಶ ಅಯೋಧ್ಯೆಯ ವಿಸ್ತಾರ ಸೀಮೆ ಇಡೀ ಭಾರತವೇ ಆಗಿತ್ತು. ಇತರ ರಾಜರುಗಳು ಸಾಮಂತರಾಗಿ ದಶರಥನಿಗೆ ಕಪ್ಪು ಕಾಣಿಕೆ ಕೊಡುತ್ತಿದ್ದರು. ವಾಲ್ಮೀಕಿ ಅಯೋಧ್ಯೆಯ ಬಗ್ಗೆ ವಿಸ್ತಾರವಾಗಿ ವರ್ಣಿಸುತ್ತಾನೆ. ಮುಖ್ಯರಾಜಧಾನಿಯ ಮೂಲನಿರ್ಮಾಣ.

ಅಯೋಧ್ಯಾ ನಾಮ ನಗರೀ ತತ್ರಾಸೀಲ್ಲೋಕ ಪಶ್ರುತಾ । ಮನುನಾ ಮಾನ ವೇಂದ್ರೇಣ ಯಾ ಪುರೀ ನಿರ್ಮಿತಾ ಸ್ವಯಂ ॥ ಎಂದಿದ್ದಾನೆ.

## ಕೋಸಲ ದೇಶದ ವಿಸ್ತಾರ

ಉತ್ತರದಲ್ಲಿ ಮಿಥಿಲಾ (ನೇಪಾಳ–ಇಂಡಿಯಾ ಗಡಿ) ಮಧ್ಯದಲ್ಲಿ ಕಾಶಿ (ವಾರಣಾಸಿ) ಅಂಗದೇಶ ಮಗಧ ರಾಜ್ಯ, ಪೂರ್ವಕ್ಕೆ–ದಕ್ಷಿಣಕ್ಕೆ ಮಿಂಧ್ಯಾ, ಪಶ್ಚಿಮದಲ್ಲಿ ಕೇಕೇಯ ಸಿಂಧು ಸರ್ವೀರ, ಪಶ್ಚಿಮ–ದಕ್ಷಿಣದಲ್ಲಿ ಸೌರಾಷ್ಟ್ರ–ಶ್ರಾವಸ್ತಿ, ಕುಸುಮತಿ ಹೀಗೆ ವಿಸ್ತಾರವಾಗಿ ಅಯೋಧ್ಯೆಗೆ ಅಧೀನವಾಗಿ ನಡೆದುಕೊಂಡಿತ್ತು.

ವಿಂಧ್ಯಾ ಪರ್ವತ (ನರ್ಮದಾ ನದಿ) ದಕ್ಷಿಣದಲ್ಲಿರುವ ದಕ್ಷಿಣ ರಾಜ್ಯಗಳು ಸಾಮಂತರಾಗಿದ್ದರೆಂದು ತಿಳಿದುಬರುತ್ತೆ.

ದಶರಥ ಮಹಾರಾಜನಿಗೆ ಸ್ವಾರ್ಥ ರಹಿತ ಮಂತ್ರಿವರ್ಗ. ಮುಖ್ಯವಾಗಿದ್ದ ಸುಮಂತು ಕೇವಲ ಅಮಾತ್ಯನಾಗಿರದೇ ರಾಜನಿಗೆ ಆಪ್ತ ಬಂಧು ಸಲಹೆಗಾರನೂ ಆಗಿದ್ದನು. ವಾಲ್ಮೀಕಿ ಅಯೋಧ್ಯೆಯ ವರ್ಣನೆಯನ್ನು ಸವಿಸ್ತಾರವಾಗಿ ವರ್ಣಿಸಿದ್ದು ಓದಿದರೆ ನಮ್ಮ ಯುಗದ ನಗರಗಳಿಗಿಂತ ಎಷ್ಟೋ ಉತ್ತಮ ಸುಂದರವಾಗಿ ದುಷ್ಟರಿಂದ ದೂರವಾಗಿತ್ತೆಂದು ತಿಳಿದುಬರುತ್ತೆ. (ಅದಕ್ಕೆಂದೇ ನಗರೀ ಎಂದಿದ್ದಾನೆ ಮನು. ಗರ = ವಿಷ/ಮಾತ್ಸರ್ಯ/ದುಷ್ಟರು ನ=ಇಲ್ಲದ್ದು ನಗರ.)

ದಶರಥನಿಗೆ ಕೊರತೆ ಚಿಂತೆ. ವಾಲ್ಮೀಕಿಯು ದಶರಥನ ಸಂತಾಪದಿಂದಾಗಿ ಎರಡನೇ ಅಧ್ಯಾಯ ಪ್ರಾರಂಭಿಸುತ್ತಾನೆ. ದಶರಥನು ಮಕ್ಕಳಿಲ್ಲವೆಂದು ಪರಿತಪ್ಪಿಸುತ್ತಾನೆ. ರಾಜನಿಗೆ ಮೂವರು ಮಡದಿಯರು. ಪಟ್ಟದ ರಾಣಿಯಾದ ಕೌಸಲ್ಯ, ಸುಮಿತ್ರ, ಕೈಕೇಯಿ ಇಷ್ಟಲ್ಲದೆ ರಾಣಿವಾಸದಲ್ಲಿ ಪ್ರಮುಖ ಪತ್ನಿಯರಾಗಲು ಅನರ್ಹರಾದವರು ೩೫೦ ಮಂದಿ ಇದ್ದರೆಂದು ತಿಳಿದುಬರುತ್ತೆ. ಈ ರೀತಿ ರಾಜರಲ್ಲಿ ಸಾಮಾನ್ಯವಾಗಿರುವುದು ಸಂಪ್ರದಾಯವಾಗಿತ್ತು.

ಪ್ರಮುಖ ಪಟ್ಟ ಮಹಿಷಿ ಕೌಸಲ್ಯಾ ಎಂದು. ಆದರೆ ಅವಳ ನಿಜವಾದ ಹೆಸರು ಏನು ಅನ್ನುವುದನ್ನು ವಾಲ್ಮೀಕಿ ತಿಳಿಸಿಲ್ಲ. ಕೋಸಲ ದೇಶ ಅಯೋಧ್ಯೆಗೆ ಸೇರಿದ ಪ್ರಾಂತ್ಯ. ಆ ದೇಶದ ಸಾಮಂತರಾಜನು ಭಾನುಮಂತನೆಂದೂ ಅವನ ಮಗಳೇ ಕೌಸಲ್ಯ. ಅವಳನ್ನು ದಶರಥ ಪ್ರಥಮವಾಗಿ ಮದುವೆಯಾದ. ಲಗ್ನವಾಗಿ ಎಷ್ಟು ವರ್ಷಗಳಾದರೂ ಪುತ್ರ ಸಂತಾನವಿರಲಿಲ್ಲ. ಹೀಗಾಗಿ ಎರಡನೇ ಮದುವೆಯಾದ. ಮಗಧ ದೇಶಾಧಿಪತಿಯಾದ ಶೂರಸೇನನೆಂಬ ರಾಜನ ತನುಜೆಯಾದ ಸುಮಿತ್ರಾದೇವಿಯೇ

ಎರಡನೆಯ ಹೆಂಡತಿ ಎಂದು ತಿಳಿಸುತ್ತಾನೆ. ಅವಳಲ್ಲಿಯೂ ಮಕ್ಕಳಾಗಲಿಲ್ಲ. ಆದ್ದರಿಂದ ಮೂರನೆಯ ಮಡದಿಯಾದಳು ಕೈಕೇಯಿ. ಇವಳು ಕೇಕೇಯ ದೇಶದ ಅರಸು ಅಶ್ವಪತಿಯ ಮಗಳು. ಈ ರೀತಿ ಕೌಸಲ್ಯಾ, ಸುಮಿತ್ರಾ ಮತ್ತು ಕೈಕೇಯಿ ಎಂಬ ಮೂವರು ಮಂದಿ ಪತ್ನಿಯರಿದ್ದರು. ಇಲ್ಲಿ ಒಂದು ವಿಚಾರ. ಕೌಸಲ್ಯೆಯ ನಿಜ ಹೆಸರಾಗಲಿ ಕೈಕೇಯ ನಿಜ ಹೆಸರೇನೆಂಬುದನ್ನು ವಾಲ್ಮೀಕಿ ತಿಳಿಸಿಲ್ಲ. ಆದರೆ ಮಗಧ ದೇಶದ ಕುವರಿಯು ಸುಮಿತ್ರಾ ಎಂದು ಹೆಸರಿನಿಂದ ಕರೆದಿದ್ದಾನೆ. ವಾಲ್ಮೀಕಿ ಕೌಸಲ್ಯಾ ಪಟ್ಟಮಹಿಳೆ ಮೊದಲನೆಯವಳೆಂದು ಖಚಿತಪಡಿಸುತ್ತಾನೆ. ಆದರೆ, ಕೆಲಕಡೆ ಕೈಕೇಯಿ ಎರಡನೆಯವಳು ಸುಮಿತ್ರಾ ಮೂರನೆಯವಳೆಂದು ಸಂದಿಗ್ಧ ಪರಿಸ್ಥಿತಿ ಉಂಟುಮಾಡುತ್ತಾನೆ. ಆದರೆ ಸುಮಿತ್ರಾ ಎರಡನೆಯವಳು. ಅವಳನ್ನು ಮಧ್ಯದವಳೆಂದು ತಿಳಿಯುತ್ತದೆ. ಅಯೋಧ್ಯಾ ಕಾಂಡದಲ್ಲಿ ರಾಮಚಂದ್ರನು ಲಕ್ಷ್ಮಣನಿಗೆ ಒಂದು ಮಾತು ಹೇಳುತ್ತಾನೆ. ಲಕ್ಷ್ಮಣಾ ಮಧ್ಯಮಳೆಂದು (ಭರತನ ತಾಯಿ) ಅವಳನ್ನು ಆಕ್ಷೇಪಿಸುವುದು ಸರಿಯಲ್ಲ. ಇಲ್ಲಿ ಕೈಕೇಯಿಯನ್ನು ಮಧ್ಯಮಳೆಂದು "ನತೇಽಂಬಾ ಮಧ್ಯಮಾ ತಾತ ಗರ್ಹಿತವ್ಯ ಕದಾಚನ" ಎಂದಿದೆ.

ಇನ್ನೊಂದು ಕಡೆ ನಿನ್ನ ತಾಯಿಯ ಸ್ಥಾನದಲ್ಲಿರುವ ಕೌಸಲ್ಯಾ ಹೇಗೋ ಹಾಗೇ ಮಧ್ಯಮಳಾದ ಸುಮಿತ್ರಾ ದುಃಖಿತಳಾಗಿದ್ದಾಳೆ – ಹೇ ಭರತ ನೀನು ತಿಳಿಯುವವನಾಗು. "ಇಯಂ ಸುಮಿತ್ರಾ ದುಃಖಾರ್ತ ದೇವಿ ರಾಜ್ಞಸ್ಯ ಮಧ್ಯಮಾ" ಎಂದು ಸುಮಿತ್ರೆಯನ್ನು ಮಧ್ಯದವಳೆಂದು ಹೇಳುತ್ತಾನೆ.

ಆದರೆ ಇವೆಲ್ಲಾ ಊಹಾಪೋಹಗಳನ್ನು ಅನೇಕ ಟೀಕಾಕಾರರು ತಮಗೆ ತೋಚಿದಂತೆ ಎಳೆದಾಡಿರುತ್ತಾರೆ. ನಿರ್ಮಾತ್ಸರ್ಯದಿಂದ ವೀಕ್ಷಿಸಿದರೆ, ದಶರಥನು ಯಾಗದಿಂದ ಬಂದ ಚರುವನ್ನು ಮೂರು ಮಡದಿಯರಿಗೆ ಹಂಚದ ಕ್ರಮದಿಂದ ಸತ್ಯಸಂಗತಿ ತಿಳಿಯುತ್ತದೆ.

ಯಜ್ಞ ಕುಂಡದಿಂದ ಉದ್ಭವಿಸಿದ ದೇವತೆ ದಶರಥನ ಕೈಗೆ ಚರು (ಪಾಯಸವನ್ನು) ಕೊಟ್ಟು ನಿನ್ನ ಮಡದಿಯರಿಗೆ ಕೊಡು ಅಂತ ಹೇಳಿ ಅಂತರ್ಧಾನ ಹೊಂದುತ್ತಾನೆ. ಅಂತೆಯೇ ರಾಜನು ಪಾಯಸವನ್ನು ಹಂಚಿದ ಕ್ರಮ ನೋಡಬೇಕು. ಸಾಧಾರಣವಾಗಿ ಮೂವರಿಗೆ ಮೂರು ಭಾಗ ಮಾಡಬೇಕಲ್ಲವೇ ? ಆದರೆ ಹಾಗೆ ಮಾಡಲಿಲ್ಲ ಹಂಚಿದ ಕ್ರಮವನ್ನು ವಾಲ್ಮೀಕಿ ತಿಳಿಸುತ್ತಾನೆ.

**ಕೌಸಲ್ಯಾಯೈ ನರಪತಿಃ ಪಾಯಸಾರ್ಧ ದದೌತದಾ ।**
**ಅರ್ಧಾದರ್ಧಂ ದದೌ ಚಾಪಿ ಸುಮಿತ್ರಾಯೈ ನರಾಧಿಪಃ ॥**
**ಕೈಕೇಯ್ಯೈ ಚಾವಶಿಷ್ಟಾರ್ಧಂ ದದೌ ಪುತ್ರಾರ್ಥಕಾರಣಾತ್**
**ಪ್ರದೌಚಾವಶಿಷ್ಟಾರ್ಧಂ ಪಾಯಸಸ್ಯಾಮೃತೋಪಮಮ್**
**ಅನುಚಿಂತ್ಯ ಸುಮಿತ್ರಾಯೈ ಪುನರೇವ ಮಹಾಮತಿಃ ॥**



ಅಂದರೆ ದಶರಥನು ಪಾಯಸವು ಬಂದ ನಂತರ ಅರ್ಧ ಭಾಗವನ್ನು ಕೌಸಲ್ಯಾಗೆ ಕೊಟ್ಟ. ಇನ್ನು ಉಳಿದ ಅರ್ಧಭಾಗವನ್ನು ಮತ್ತೆ ಎರಡು ಭಾಗ ಮಾಡಿ ಒಂದನ್ನು ಸುಮಿತ್ರಾಗೆ ಕೊಡುತ್ತಾನೆ. ಇನ್ನು ಉಳಿದ ಭಾಗದಲ್ಲಿ ಪುನಃ ಎರಡು ಮಾಡಿ ಅದರಲ್ಲಿ ಒಂದಂಶವನ್ನು ಕೈಕೇಯಿಗೆ ಕೊಡುತ್ತಾನೆ. ಇಷ್ಟಾದ ಮೇಲೆ ಉಳಿದ ಸ್ವಲ್ಪ ಭಾಗವನ್ನು ಪುನಃ ಸುಮಿತ್ರಾಗೆ ಕೊಡುತ್ತಾನೆ.

**ಒಟ್ಟು ಪಾಯಸದ ಭಾಗ**

(50%) $\frac{1}{2}$ ಅಂಶ ಕೌಸಲ್ಯಾಗೆ ಇನ್ನೂ $\frac{1}{2}$ ಅಂಶ(50%)ವನ್ನು ಎರಡು ಭಾಗ ಮಾಡಿದ ಅಂದರೆ $\frac{1}{2}$ ದಲ್ಲಿ $\frac{1}{4} + \frac{1}{4}$ ಆಯಿತು. ಅದರಲ್ಲಿ $\frac{1}{4}$ ನ್ನು ಸುಮಿತ್ರಾಗೆ ಉಳಿದದ್ದು $\frac{1}{4}$ ಪುನಃ ಇದನ್ನು ಎರಡು ಭಾಗ ಮಾಡಿದ $\frac{1}{8}+\frac{1}{8}$ ಆಯಿತು. $\frac{1}{8}$ (ಎಂಟನೇ ಅಂಶ)ವನ್ನು ಕೈಕೇಯಿಗೆ ಕೊಟ್ಟ. ಇನ್ನೂ ಉಳಿದ $\frac{1}{8}$ರ ಅಂಶವನ್ನು ಪುನಃ ಸುಮಿತ್ರಾಗೆ ಕೊಟ್ಟ.

50% ಕೌಸಲ್ಯಾಗೆ, $\frac{1}{4}$ ಸುಮಿತ್ರಾಗೆ $\frac{1}{8}$ ಕೈಕೇಯಿಗೆ, $\frac{1}{8}$ ಪುನಃ ಸುಮಿತ್ರಾಗೆ ಹೀಗೆ ಹಂಚಿದನೆಂದು ತಿಳಿದುಬರುತ್ತೆ.

ದಶರಥನು ಪಟ್ಟದ ಅರಸಿಗೆ 50% ಕೊಟ್ಟ. ಇನ್ನೂ 50%ನ್ನೂ ಎರಡು ಭಾಗ ಮಾಡಬೇಕಿತ್ತು. ಮಾಡಲಿಲ್ಲ. ವಾಲ್ಮೀಕಿ ನಿಗೂಢ ಅಂಶವನ್ನು ತೋರಿಸುತ್ತಾನೆ. ದಶರಥನು ಸುಮಿತ್ರಾಗೆ ಕೊಟ್ಟಾದ ಮೇಲೆ ಉಳಿದುದನ್ನು ಕೈಕೇಯಿಗೆ ಕೊಡಲು ಒಪ್ಪಲಿಲ್ಲ. ಅದನ್ನು ಪುನಃ ಎರಡು ಭಾಗ ಮಾಡಿದ ಒಂದನ್ನೂ ಕೈಕೇಯಿಗೆ ಉಳಿದುದನ್ನು ಯಾರಿಗೆ ಕೊಡಬೇಕೆಂದು ಚಿಂತಿಸಿ ಕೊನೆಗೆ ಸುಮಿತ್ರಾಗೇ ಕೊಟ್ಟ. ಇದನ್ನು ಕವಿ ತಿಳಿಸುತ್ತಾನೆ.

**ಅನುಚಿಂತ್ಯ ಸುಮಿತ್ರಾಯೈ ಪುನರೇವ ಮಹಾಮತಿಃ ।** ಏನನ್ನು ಚಿಂತಿಸಿದ ಇದನ್ನು ಮುಂದೆ ವಿಚಾರಮಾಡುವ. ಈ ಕ್ರಮದ ಪ್ರಕಾರ ಕೌಸಲ್ಯಾ ನಂತರ ಸುಮಿತ್ರಾ ಅವಳೇ ಮಧ್ಯಮಾ ಕೈಕೇಯಿ ಕೊನೆಯವಳಾದಳು.

ಇದರ ಬಗ್ಗೆ ಹೆಚ್ಚು ತಲೆ ಬಿಸಿ ಮಾಡಿಕೊಳ್ಳುವುದು ಬೇಡ. ದಶರಥನಿಗೆ ಮಕ್ಕಳಿರಲಿಲ್ಲಾ ಅಂತ ಹೇಳಲಾಗದು. ಅವನಿಗೆ **ಶಾಂತಾ** ಎಂಬ ಹೆಣ್ಣುಮಗಳಿದ್ದಳು. ಅವನ ಆಪ್ತ ಸಖನಾದ ರೋಮಪಾದ (ರೋಮಪಾದನೆಂಬುದು ನಾಮಾಂತರ **ಅಥ ಚಿತ್ರರಥಸ್ಯಾಪಿ ಪುತ್ರೋದಶದಥೋಽಭವತ್ । ರೋಮಪಾದ ಇತಿ ಖ್ಯಾತೋ ಯಸ್ಯ ಶಾಂತಾಸುತಾ ಭವತ್**(ಹರಿ–೧.೩೧ .೪೬) ನಿಗೆ ಸಾಕು ಮಗಳಾಗಿ ಕೊಟ್ಟದ್ದು ಆದರೆ ದಶರಥನಿಗೆ ಗಂಡು ಸಂತಾನ ಬೇಕಿತ್ತು. ಅದಕ್ಕಾಗಿ ಯಜ್ಞ ಮಾಡಿದ.

**ಋಷ್ಯಶೃಂಗ ವಿಭಾಂಡಕ ಋಷಿ** ಒಂದು ಸಲ ಕೈಕಾಲು ತೊಳೆಯುವ ಉದ್ದೇಶದಿಂದ ಒಂದು ಮಡುವಿನಲ್ಲಿ ಇಳಿದ. ಆಗ ಅಲ್ಲಿ ಊರ್ವಶಿಯನ್ನು ನೋಡಿದ. ಅವಳ ಸೌಂದರ್ಯವನ್ನು ನೋಡಿದ ಕೂಡಲೇ ರೇತೋಸ್ಖಲನವಾಯಿತು. ಅದನ್ನು

ಒಂದು ಹೆಣ್ಣು ಜಿಂಕೆ ಕುಡಿಯಿತು. ತನ್ಮೂಲಕ ಜನಿಸಿದವನೇ ಋಷ್ಯಶೃಂಗ. ವನದಲ್ಲೇ ಜನಿಸಿ ಬೆಳೆದು ನಗರ ಸ್ತ್ರೀಯರ ಬಗ್ಗೆ ಏನೂ ತಿಳಿಯದೆ, ತಪೋನಿಷ್ಟನಾಗಿ ಮಹಾ ತೇಜೋತ್ಪನ್ನನಾದ. ಅವನ ತಪಸ್ಸಿನ ಮಹಿಮೆ ಹೇಗಿತ್ತೆಂದರೆ ಎಲ್ಲಿ ಋಷ್ಯಶೃಂಗನಿರುತ್ತಾನೋ ಅಲ್ಲೆಲ್ಲಾ ಅನಾವೃಷ್ಟಿ ಎಂಬುದಿರುವುದಿಲ್ಲವೆಂದು. ಒಮ್ಮೆ ಅಂಗ ದೇಶಾಧಿಪತಿ ತನ್ನ ದೇಶದಲ್ಲಿ ಅನಾವೃಷ್ಟಿಯಾಯಿತು. ಆಗ ಋಷ್ಯಶೃಂಗನನ್ನು ಬರೆಮಾಡಿಕೊಂಡಿದ್ದರ ಫಲವಾಗಿ ಸುಭಿಕ್ಷೆಯಾಯಿತು. (ಭಾರ–ವನ, ರಾಮ ೧–೧೧) ಸಂತುಷ್ಟನಾದ ರೋಮಪಾದ ತನ್ನಿರುವ ದಶರಥರಾಜನ ಔರಸ ಮಗಳಾದ ಶಾಂತಾಳನ್ನು ಕೊಟ್ಟು ಮದುವೆ ಮಾಡಿದ. ದಶರಥ ಮಹಾರಾಜ ಪುತ್ರಾರ್ಥಿಯಾಗಿ ಯಜ್ಞ ಮಾಡಬೇಕೆಂಬ ಸೂಚನೆ ಬಂದಿತು. ಯಜ್ಞಕ್ಕಾಗಿ ಋತ್ವಿಕರು ಬೇಕು ಎಂದು ಪ್ರಚಾರ ಮಾಡಿದಾಗ ಮಂತ್ರಿ ಸುಮಂತು ಋಷ್ಯಶೃಂಗನ ಹೆಸರು ಸೂಚಿಸಿ ಅವನನ್ನು ಕರೆಯಿಸಿದನು. ಹೀಗೆ ಋಷ್ಯಶೃಂಗನು ದಶರಥನ ಅಳಿಯನೇ ಆಗಿದ್ದ. (ರಾಮ ಬಾಲ ೭–೧೬)

ಯಜ್ಞ ಮಾಡಿದ ಚರು ಬಂತು ಹೆಂಡಿರಿಗೆ ಹಂಚಿದ್ದೂ ಆಯಿತು. ಆದರೆ ದಶರಥನು ಹಂಚಿದ ಕ್ರಮವನ್ನು ವಿಚಾರ ಮಾಡಬೇಕು. ಕೈಕೇಯಿಗೆ $\frac{1}{8}$ನೇ ಭಾಗಮಾತ್ರ ಕೊಟ್ಟ. ಏಕೆ ಹೀಗೆ ಮಾಡಿದ ? ಇದಕ್ಕೆ ಒಂದು ರಹಸ್ಯವಿದೆ. ಇದನ್ನ **"ಅನುಚಿಂತ್ಯ ಸುಮಿತ್ರಾಯೈ ಪುನರೇವ ಮಹಾಮತಿಃ"** ಎಂದಿದ್ದಾನೆ ವಾಲ್ಮೀಕಿ. ಅಂದರೆ ರಾಜನು ಬಹಳಷ್ಟು ಚಿಂತಿಸಿ ಚಿಂತಿಸಿ ಕೊನೆಗೆ ಹೀಗೆ ಪಾಯಸ ಪ್ರದಾನ ಮಾಡಿದ. ಏಕೆ ಅಷ್ಟೊಂದು ಚಿಂತೆ ಎಂದರೆ ಕೈಕೇಯಿಯನ್ನು ಮದುವೆಯಾಗುವ ಮುಂಚೆ ಒಂದು ಪ್ರಸಂಗ ನಡೆಯಿತು. ಕೌಸಲ್ಯಾಗೆ ಪುತ್ರಸಂತಾನವಾಗುವ ಸಂಭವ ದೂರವೇ ಉಳಿಯಿತು. ಎರಡನೇ ಮದುವೆ ಸುಮಿತ್ರಾದೊಂದಿಗೆ ಆದರೂ ಮಕ್ಕಳಾಗಲಿಲ್ಲ. ಅದಕ್ಕಾಗಿ ರಾಜನು ಪುತ್ರಪ್ರಾಪ್ತಿಗಾಗಿ ಮೂರನೇ ಮದುವೆ ಆಗಬೇಕಾಯಿತು. ಕೇಕೇಯ ದೇಶದ ರಾಜ ಅಶ್ವಪತಿಯ ಮಗಳು. ಅವಳ ಸೌಂದರ್ಯದ ಬಗ್ಗೆ ಸಾಕಷ್ಟು ಖ್ಯಾತಿಯಾಗಿತ್ತು. ಅವಳನ್ನು ಹೆಂಡತಿಯಾಗಿ ಪಡೆಯಬೇಕೆಂದು ಅಪೇಕ್ಷಿಸಿದ. ಇದನ್ನು ತಿಳಿದ ಅಶ್ವಪತಿ ಮೊದಲು ಈ ಸಂಬಂಧ ಒಪ್ಪಲಿಲ್ಲ ಆದರೂ ರಾಜನಿಗೆ ಹೇಳಿ ಕಳುಹಿಸಿದ. ಈಗಾಗಲೇ ಇಬ್ಬರು ಮಹಿಷಿಯರು ಇರುತ್ತಾರೆ. ಈಗ ನನ್ನ ಮಗಳನ್ನು ಲಗ್ನವಾದರೆ ಕೌಸಲ್ಯಳಿಗೆ ಗಂಡು ಸಂತಾನವಾದರೆ ತನ್ನ ಮಗಳ ಗತಿಯೇನು ? ಕೈಕೇಯಿಯ ಮಕ್ಕಳು ದಾಸರಂತೆ ಆಗುತ್ತಾರೆ. ಆದ್ದರಿಂದ ಒಂದು ನಿಬಬಂಧವನ್ನು ರಾಜ ದಶರಥ ಸಮ್ಮತಿಸಬೇಕು. ಹಾಗೇನಾದರೂ ಕೈಕೇಯಿಗೆ ಮಗನಾದರೆ ಅವನಿಗೇ ಮುಂದಿನ ರಾಜಪಟ್ಟ ಕಟ್ಟಬೇಕು. ಇದಕ್ಕೆ ಒಪ್ಪಿ ಮಾತು ಕೊಟ್ಟರೆ ತನ್ನ ಮಗಳನ್ನು ಧಾರೆಯೆರೆದುಕೊಡಲು ಅಭ್ಯಂತರವಿಲ್ಲವೆಂದು. ದಶರಥ ವಿಚಾರ ಮಾಡಿ ಇಂತಹ ಒಪ್ಪಿಗೆಗೆ ಸಮ್ಮತಿಸಿದ ಅವನಿಗೆ ಸರಿ ಎನಿಸಿತು. ವಿಧಿಯ ಲೀಲೆಯೇ ಬೇರೆಯಾಗಿತ್ತು. ದಶರಥನು ಲಗ್ನಮಂಟಪದಲ್ಲಿ ಅಶ್ವಪತಿಗೆ ವಚನಕೊಟ್ಟ. ಆದರೆ, ಕೈಕೇಯಿಯ ಸೌಂದರ್ಯಕ್ಕೆ ವಶನಾಗಿದ್ದ. ಒಳಗೊಳಗೇ ತಾನು ಈ ರೀತಿ



ಮಾತು ಕೊಟ್ಟದ್ದು ಸರಿ ಎಂದು ಕಾಣಲಿಲ್ಲ. ಕಸಿವಿಸಿಪಡುತ್ತಿದ್ದ. ಏನು ಮಾಡುವುದು ? ಈಗ ಪರೀಕ್ಷೆಗೆ ಬಂದಿದೆ. ಯಜ್ಞ ಪಾಯಸ ಹಂಚಬೇಕು. ಅವನಿಗೆ ಕೌಸಲ್ಯಾತನಯನೇ ಮುಂದಿನ ಅರಸು ಆಗಬೇಕು ಅನ್ನುವುದಿತ್ತು.

ಅದಕ್ಕೆ ಕಾರಣವೂ ಇದ್ದಿತು. ಕೌಸಲ್ಯ ಸೌಮ್ಯ, ಶಾಂತ, ಗಂಭೀರ ಸ್ವಭಾವದವಳು. ತಾನು ಪಟ್ಟದರಾಣಿ ಎಂಬ ಅಹಂಕಾರ ಅವಳಲ್ಲಿರಲಿಲ್ಲ. ಇನ್ನು ಕೈಕೇಯಿ ತನ್ನ ಸೌಂದರ್ಯದ ಪಗಡಿಯಲ್ಲಿ ಅಟ್ಟಹಾಸ ನಡೆನುಡಿಯಲ್ಲಿ ರಾಜನ ಪ್ರೀತಿಯನ್ನು ತನ್ನ ಸ್ವಾರ್ಥಕ್ಕೆ ಚೆನ್ನಾಗಿ ಬಳಸಿಕೊಳ್ಳುತ್ತಿದ್ದಳು. ಹಠಮಾರಿ. ಇದನ್ನು ಭರತನು ತಿಳಿಸುತ್ತಾನೆ. "ಆತ್ಮಾಕಾಮ ಸದಾಚಂಡಿ ಪ್ರಜ್ಞಾ ಮಾನಿನಿ" ತನ್ನಂತೆ ಎಲ್ಲವೂ ನಡೆಯಬೇಕು ಎಂಬ ಸ್ವಭಾವ. ರಾಜನಿಗೆ ಇದು ಮುಸಿಮುಸಿಯಾಗಿ ಕಂಡಿತು. ಆದರೂ/ಆಗದಿರಲೂ ನೋಡೋಣ ಎಂದು ನಿರ್ಧಾರ ಮಾಡಿದ. ಹೇಗಾದರೂ ಮಾಡಿ ಕೈಕೇಯಿಗೆ ಮಕ್ಕಳಾಗದಿದ್ದರೆ ಒಳಿತೆಂದು ಅದಕ್ಕಾಗಿ ಪಾಯಸದ ನಾಲ್ಕನೇ ಒಂದು ಭಾಗ ಮಾತ್ರ ಕೊಟ್ಟ. ಇದರಿಂದ ಅವಳಲ್ಲಿ ಮಗುವಾಗುವುದು ಅಸಂಭವವಾಗಲಿ ಎಂದು ಹಾಗೆ ಮಾಡಿದನೆಂದು ತಿಳಿದುಬರುತ್ತೆ.

## ಶ್ರೀರಾಮಾವತಾರ

ಯಜ್ಞವಾಗಿ ಎರಡು ವರ್ಷ ಕಳೆದಿದೆ. ಚೈತ್ರ ಮಾಸ ಶುಕ್ಲಪಕ್ಷ ನವಮಿ ಪುನರ್ವಸು ನಕ್ಷತ್ರ ಐದು ಗ್ರಹಗಳು ಉಚ್ಚ ಸ್ಥಾನದಲ್ಲಿದ್ದಾಗ ಮಧ್ಯಾಹ್ನಕಾಲ **"ಕೌಸಲ್ಯಾಽಜನಯದ್ರಾಮಂ ಸರ್ವಲಕ್ಷಣ ಸಂಯುತಮ್"** ಸುಮುಹೂರ್ತದಲ್ಲಿ ಸರ್ವಲಕ್ಷಣ ಸಂಪನ್ನನಾದ ಜಗನ್ನಾಥನು ಶ್ರೀರಾಮಚಂದ್ರನಾಗಿ ಅವತರಿಸಿದನು. ನಂತರ ಮೂರು ತಿಂಗಳ ನಂತರ ಜ್ಯೇಷ್ಠ ಮಾಸ ಆಶ್ಲೇಷಾ ನಕ್ಷತ್ರ ಅಂದು ಸುಮಿತ್ರ ಗಂಡು ಮಗುವನ್ನು ಪ್ರಸವಿಸಿದಳು. ಅವನನ್ನು **ಲಕ್ಷ್ಮಣ** ಎಂದು ನಾಮಕರಣ ಮಾಡಿದರು. ಮತ್ತೆ ಆರು ತಿಂಗಳು ಕಳೆದ ನಂತರ ಪುಷ್ಯ ಮಾಸ ಪುಷ್ಯ ನಕ್ಷತ್ರ ಕೈಕೇಯಿಗೆ ಗಂಡು ಸಂತಾನವಾಯಿತು. ಅವನಿಗೆ **ಭರತ**ನೆಂದು. ಹೆಸರಿಟ್ಟರು.

ಅಲ್ಲಿಂದ ಮುಂದೆ ಐದು ತಿಂಗಳ ನಂತರ ಜ್ಯೇಷ್ಠ ಮಾಸ ಆಶ್ಲೇಷಾ ನಕ್ಷತ್ರದಲ್ಲಿ ಸುಮಿತ್ರಾಗೆ ಎರಡನೇ ಗಂಡು ಮಗುವಾಯಿತು. ಅವನನ್ನು **ಶತೃಘ್ನ** ಎಂದು ಕರೆದರು. ಹೀಗೆ ರಾಮ, ಲಕ್ಷ್ಮಣ, ಭರತ, ಶತೃಘ್ನರೆಂಬ ನಾಲ್ಕು ಗಂಡು ಸಂತಾನದಿಂದ ದಶರಥನಿಗೆ ಅತ್ಯಾನಂದವಾಯಿತು.

ಇಲ್ಲಿ ಕೆಲ ವ್ಯಾಖ್ಯಾನಕಾರರ ಪ್ರಕಾರ ರಾಮನಾದ ನಂತರ ಭರತ, ಆಮೇಲೆ ಲಕ್ಷ್ಮಣ, ಶತೃಘ್ನರು ಅವಳಿ ಮಕ್ಕಳಾಗಿ ಹುಟ್ಟಿದರೆಂದು ವ್ಯಾಖ್ಯಾನಿಸಿದ್ದಾರೆ. ಅದರ ಬಗ್ಗೆ ಹೆಚ್ಚು ತಲೆ ಬಿಸಿಮಾಡಿಕೊಳ್ಳದೇ ಇರುವುದು ಲೇಸು. ಆದರೂ ವಾಲ್ಮೀಕಿ ಏನು ಹೇಳುತ್ತಾನೆ ? ವಿಚಾರ ಮಾಡುವ. ಬಾಲಕಾಂಡ ೧೮ನೇ ಅಧ್ಯಾಯದಲ್ಲಿ ಹೀಗೆ ತಿಳಿಸುತ್ತಾನೆ.

**ಶ್ರೀರಾಮಾವತಾರ ಘಟ್ಟ** : ಇಲ್ಲಿ ಕವಿ ಸಂದೇಹವಾಗುವಂತೆ ಹೇಳುತ್ತಾನೆ. **ಭರತೋನಾಮ ಕೈಕೇಯ್ಯಾಂ ಜಜ್ಞೇ ಸತ್ಯ ಪರಾಕ್ರಮಃ (ಸಾಕ್ಷಾತ್ ವಿಷ್ಣೋಶ್ಚತುರ್ಭಾಗಃ_____।)** ಶ್ಲೋಕ ೧೨.

**ಅಥ ಲಕ್ಷ್ಮಣ ಶತೃಘ್ನೋ ಸುಮಿತ್ರಾವ್ಯ ಜನಯತ್ಸುತೋ।**
**_____ವೀರೌ ವಿಷ್ಣೋಃ ಅರ್ಧಸಮನ್ವಿತೌ ॥** (ಶ್ಲೋಕ ೧೩)
**ಜ್ಯೇಷ್ಠಂರಾಮಂ ಮಹಾತ್ಮಾನಂ ಭರತಂ ಕೈಕೇಯೀಸುತಂ।**
**ಸೌಮಿತ್ರೀಲಕ್ಷ್ಮಣಮಿತಿ ಶತೃಘ್ನಮಪರಂತಥ ॥** (ಶ್ಲೋಕ ೧೮)

ಇದರಿಂದ ರಾಮ, ಭರತ, ಲಕ್ಷ್ಮಣ, ಶತೃಘ್ನರೆಂಬುದು ತಿಳಿದುಬರುತ್ತದೆ. ಇಲ್ಲಿ ವಾಲ್ಮೀಕಿ ೧೨ನೇ ಶ್ಲೋಕದಲ್ಲಿ ನಾಲ್ಕು ಜನ ಮಕ್ಕಳು **ವಿಷ್ಣೋಃ ಚತುರ್ಭಾಗಾಃ** ಎಂದಾಗ ರಾಮಚಂದ್ರನು ಸಾಕ್ಷಾತ್ ನಾರಾಯಣನ ಮೂಲ ಅವತಾರ. ಬಾಕಿ ಮೂರು ಜನರು ವಿಷ್ಣುವಿನ ಅಂಗಾವತಾರಗಳು ಎಂದಿದ್ದಾನೆ. ಹಾಗೆಂದರೆ ಏನು ?

ಶ್ರೀರಾಮಚಂದ್ರ – ವಿಷ್ಣುವಿನ ಅವತಾರ ವಾಸುದೇವ

ಲಕ್ಷ್ಮಣ – ಸಂಕರ್ಷಣ (ಶೇಷ ದೇವರು)

ಭರತ – ಪ್ರದ್ಯುಮ್ನ ಪರಮಾತ್ಮನ ಚಕ್ರ

ಶತೃಘ್ನ – ಅನಿರುದ್ಧ (ಪರಮಾತ್ಮನ ಶಂಖ)

ಈ ಕ್ರಮದ ಪ್ರಕಾರವು ತೊಡಕು ಬಿಡಿಸಿದಂತಾಗಲಿಲ್ಲ. ಪ್ರಸಿದ್ಧವಾದ ಪಾಠ ಅತಿ ಪ್ರಾಚೀನದ್ದೆಂದು ಇಟ್ಟುಕೊಂಡ ನಂಬಿಕೆಯಲ್ಲಿ ರಾಮ, ಲಕ್ಷ್ಮಣ ಶತೃಘ್ನರೇ ಪ್ರಥಕ್ ಪೃಥಕ್ ಎಂದಿದೆ. ೨೩ನೇ ತ್ರೇತಾಯುಗದಲ್ಲಿ ನಡೆದ ರಾಮಾಯಣ ಕಥೆ ಸಾಕಷ್ಟು ಯುಗಗಳು ವರ್ಷಗಳು ಕಳೆದಿದೆ ಅಂದಮೇಲೆ ನಿಜ ರಾಮಾಯಣದಲ್ಲಿ ಪ್ರಕ್ಷಿಪ್ತ ಹೇಳಲಾಗದಷ್ಟು ಪಠಾಂತರಗಳು ಆಗಿರಲಿಕ್ಕೇಬೇಕು. ಈ ಒಂದು ಅಂತರ ಶ್ರೀಮದ್ಭಾಗವತದಲ್ಲಿಯೂ ಕಾಣುತ್ತೇವೆ.

ಶ್ರೀರಾಮನ ಜನನವಾಯಿತು. ಬೆಳೆದ ತಮ್ಮಂದಿರ ಜೊತೆ. ಈ ರಾಮಚಂದ್ರ ನಮಗೆ ಪುನಃ ಕಾಣಿಸುವುದು ೧೬ನೇ ನವ ಯುವಕನಾದಾಗ. ಅದೂ ವಿಶ್ವಾಮಿತ್ರರ ಆಗಮನದಿಂದ ದಶರಥನು ಹೇಳುತ್ತಾನೆ.

**ಊನಷೋಡಶವರ್ಷೇ ಮೇ ರಾಮೋ ರಾಜೀವಲೋಚನಃ** (ಅಯೋ ೨೦–೨)

ರಾಮನ ಬಾಲಲೀಲೆಗಳ ವರ್ಣನೆ ಇಲ್ಲ. ಶ್ರೀಕೃಷ್ಣ ಪರಮಾತ್ಮ ಹೇಗೆ ಗೋಕುಲದಲ್ಲಿ ಬಾಲಲೀಲೆಗಳಿಂದ ನಂದ ಯಶೋದಾ ಇತ್ಯಾದಿಗಳಿಗೆ ತೋರಿಸಿ ಆನಂದಪಡುವಂತೆ ಮಾಡಿದ. ಇಲ್ಲಿ ರಾಮನ ಗಾಂಭೀರ್ಯ ರೂಪ ಇತ್ಯಾದಿಗಳನ್ನು



ನೋಡುತ್ತಾ ದಶರಥ ಹಾಗೂ ಅವನ ಮಡದಿಯರು ಆನಂದಿಸುತ್ತಿದ್ದರು. ಶ್ರೀರಾಮನನ್ನು ಕುರಿತು ಒಂದು ಶ್ಲೋಕವಿದೆ.

**ರಾಮಾಯ ರಾಮಭದ್ರಾಯ ರಾಮಚಂದ್ರಾಯ ವೇದಸೇ**
**ರಘುನಾಥಾಯ ನಾಥಾಯ ಸೀತಾಯಾಃ ಪತಯೇ ನಮಃ**

ಇದು ಸರ್ವರಿಗೂ ತಿಳಿದಿದ್ದೆ. ಆದರೆ ಇದರಲ್ಲಿ ರಾಮಚಂದ್ರನನ್ನು ಯಾವ ರೀತಿ ಯಾರು ಯಾರು ಕರೆಯುತ್ತಿದ್ದರೆಂಬುದು ಸೂಚಿತವಾಗುತ್ತದೆ. ದಶರಥ ಮಹಾರಾಜ ಅಕ್ಕರೆ ಮಗನನ್ನು ರಾಮಾ ಎಂದೂ ಮಾತೆ ಕೌಸಲ್ಯಾ ಮಗನನ್ನು ರಾಮಚಂದ್ರಾ ಎಂದು ಕರೆಯುತ್ತಿದ್ದರು. ಕೈಕೇಯಿ ರಾಮನನ್ನು ಕಂಡರೆ ಬಹಳ ಪ್ರೀತಿ. ತನ್ನ ಮಗ ಭರತನಿಗಿಂತಲೂ ಒಂದು ಗುಂಜಿ ರಾಮನಲ್ಲಿ ಅಕ್ಕರೆಯಿಂದ ರಾಮಚಂದ್ರಾ ಅನ್ನುತ್ತಿದ್ದಳು. ಋಷಿ ಮುನಿಗಳು ವೇದ ಪ್ರತಿಪಾದ್ಯನಾದವನೇ ಎಂದು ಕರೆಯುತ್ತಿದ್ದರು. (ವೇದಸೇ) ಇಲ್ಲಿ ಕೆಲ ಕಥೆಗಳು ಹುಟ್ಟಿಕೊಂಡಿವೆ. ಶ್ರೀರಾಮ ಒಮ್ಮೆ ಮಗುವಾಗಿದ್ದಾಗ ಪೂರ್ಣಿಮಾ ರಾತ್ರಿ ಆಕಾಶದಲ್ಲಿ ಬೆಳಗುವ ಚಂದ್ರನನ್ನು ನೋಡಿದ. ಆ ಚಂದ್ರ ತನಗೆ ಬೇಕು. ಆಟವಾಡಬೇಕು ಎಂದು ಹಠಹಿಡಿದ. ರಾಜನಿಗೆ ಏನು ಮಾಡಲು ತೋಚಲಿಲ್ಲ. ಆಗ ಒಂದು ಕನ್ನಡಿಯನ್ನು ತಂದು ಅದರಲ್ಲಿ ಪ್ರತಿಬಿಂಬಿತವಾದ ಚಂದ್ರನನ್ನು ತೋರಿಸಿದನು. ರಾಮನು ಆನಂದಪಟ್ಟ ಎಂದೂ ಕಟ್ಟು ಕಥೆಗಳನ್ನು ಕೇಳಿದ್ದೇವೆ. ಇಂತಹ ಕಥೆಗಳು ಹುಟ್ಟಿಕೊಂಡಿರುವುದೆಷ್ಟೋ ಕಾಣಬಹುದು. ಅರಸನ ಮಂತ್ರಿ ವರ್ಗದವರು ರಘುನಾಥನೆಂದು ಸತೀಮಣಿ ಸೀತಾದೇವಿ ಪತಿಯನ್ನು ಹೆಸರಿಟ್ಟು ಕರೆಯದೆ ಭಾರತೀಯ ನಾರೀಮಣಿ ಸಂಪ್ರದಾಯದಂತೆ ನಾಥ, ಸ್ವಾಮಿ ಎಂದೇ ಕರೆಯುತ್ತಿದ್ದಳು. ಇನ್ನು ಅಯೋಧ್ಯ ನಗರ ವಾಸಿಗಳು ನೋಡಿರೆ. ನಮ್ಮ ಸೀತಾಪತಿಯನ್ನು ಎಂದು ಹೆಮ್ಮೆ ಆದರದಿಂದ ಕಾಣುತ್ತಿದ್ದರು. ಅಯೋಧ್ಯೆಯಲ್ಲಿ ಸಂತಸದ ಸಂಭ್ರಮ. ನಾಲ್ಕು ಮಕ್ಕಳು ನವಯುವಕರಾಗಿ ನೋಡುವವರಿಗೆ ಹಬ್ಬವಾಗಿದ್ದರು. ಶ್ರೀರಾಮಚಂದ್ರನು ಕೇಂದ್ರ ಬಿಂದು. ಆಜಾನುಬಾಹು, ಸದಾ ನಗುಮುಖ, ವಿಶಾಲವಾದ ಭುಜದ್ವಯಗಳು ಎತ್ತರವಾದ ಲಲಾಟ ಇಂತಹವನು ಶ್ರೀರಾಮ.

### ವಿಶ್ವಾಮಿತ್ರರ ಆಗಮನ

ಶ್ರೀಮದಾಚಾರ್ಯರು ಮಹಾಭಾರತ ತಾತ್ಪರ್ಯ ನಿರ್ಣಯದಲ್ಲಿ **ತತಃ ಸುವಂಶೇ ಶಶಿನಃ ಪ್ರಸೂತೌ। ಗಾಧೀತಿ ಶಕ್ರಸ್ತನು ಜೌಽಸ್ಯಚಾಸೀತ್ । ವರೇಣ ವಿಪ್ರತ್ವಮ ವಾಪಯೋಽಸೌ । ವಿಶ್ವಸ್ಯಮಿತ್ರಂ ಸ ಇಹಾಽಜಗಾಮ** (ಮ.ಭಾ.ತಾ.ನಿ. ಅಧ್ಯಾಯ–೪ ಶ್ಲೋಕ–೪) ಇಹಾ ಆಜಹಾಯ ಎಂದು ವಿಶ್ವಾಮಿತ್ರರನ್ನು ಕರೆದಿದ್ದಾರೆ. ವಿಶ್ವಕ್ಕೇ ಮಿತ್ರಪ್ರಾಯರಾದ ಋಷಿಗಳು ಅಂದರೇನು ? ಜಗತ್ತೇ ಶ್ರೀರಾಮಚಂದ್ರ ರಾಜಕುಮಾರನಷ್ಟೇ ಅಲ್ಲ. ಅವನು ಸಾಕ್ಷಾತ್ ನಾರಾಯಣನ ಅವತಾರವೆಂದು

ತೋರಿಸಿಕೊಟ್ಟರು. ಮುಂದೆ ಈ ರಾಮಚಂದ್ರನು ದುಷ್ಟ ದಮನ ಮಾಡಿ ಲೋಕಕ್ಕೆ ಹಿತವನ್ನು ನೀಡುವ ಆಪ್ತನು ಅವನು ಎಂದು ತಿಳಿಸಲು ಮಿತ್ರನಂತೆ ಹಿತ ಬೋಧನೆ ಮಾಡುವ ಋಷಿಗಳು ಎಂದು ತೋರಿಸಲು ಆಚಾರ್ಯರು ತಿಳಿಸಿರುತ್ತಾರೆ. ಶ್ರೀಮದಾಚಾರ್ಯರು ವಿಶ್ವಾಮಿತ್ರರನ್ನು **ವಿಶ್ವಸ್ಯಮಿತ್ರಂ** ಎಂದೇ ತಿಳಿಸಿರುತ್ತಾರೆ. ಹಾಗೇಕೆ ಗೌಣವಾಗಿ ಹೇಳಿದರು ಅಂದರೆ ಇವರು ಮಿತ್ರರಂತೆ ಇದ್ದರು. ಮಿತ್ರ ಅಂತ ಯಾರನ್ನು ಕರೆಯಬೇಕು ? ವಾಡಿಕೆಯ ಪ್ರಕಾರ ಸಾಧಾರಣವಾಗಿ ಬಂಧು, ಆಪ್ತ, ಗುರು ಮತ್ತು ಮಿತ್ರರೆಂಬುದಾಗಿ ಕರೆಯುವುದುಂಟು. ಬಂಧುಗಳೆಂದರೆ ನೆಂಟರು. (ಮನೆಯಲ್ಲಿ ವಿಶೇಷ ಸಂದರ್ಭದಲ್ಲಿ ತಾತ್ಕಾಲಿಕವಾಗಿ ಬಂದು ಹೋಗುವವರು. ಆಪ್ತರು ನಮಗೆ ತುಂಬಾ ಬೇಕಾದವರು. ಬಂಧುವರ್ಗದಲ್ಲಿ ಸೇರದೆ ಅಗುಹೋಗುಗಳಿಗೆ ನೆರವಾಗುವವರು. ಗುರು–ನಮ್ಮ ಇಹದಲ್ಲಿಯೂ ಮತ್ತು ಪಾರತ್ರಿಕದಲ್ಲೂ ಬೋಧನೆ ನೀಡಿ ಮಾರ್ಗದರ್ಶನ ಮಾಡುವವರು. ಮಿತ್ರ ಎಂದರೆ ಮೇಲಿನ ವರ್ಗಕ್ಕಿಂತ ಹೆಚ್ಚಿನ ರೀತಿಯಲ್ಲಿ ನಮ್ಮ ಕಷ್ಟ ಕಾರ್ಪಣ್ಯಗಳಲ್ಲಿ ಆತ್ಮೀಯತೆಯಿಂದ ಸರ್ವರೀತಿಯಿಂದಲೂ ಬೆಂಬಲ ಕೊಟ್ಟು ಸಹಕರಿಸಿ ಇತರರಲ್ಲಿ ನಾವು ಸಾತ್ವಿಕರು, ಉಪಕಾರ ಭಾವನೆ ಇರುವವರು ಎಂದು ತೋರಿಸುವವರು. **''ತನ್ಮಿತ್ರ ಮಾಪದಿ ಸುಖೇಚ ಸಮಿತ್ರಂ''**ನೆಂದು ಭಾರವಿ ತಿಳಿಸುತ್ತಾನೆ. ಈ ವರ್ಗಕ್ಕೆ ಸೇರಿದವರೇ ವಿಶ್ವಾಮಿತ್ರರು. ಆದ್ದರಿಂದ ಶ್ರೀಆಚಾರ್ಯರು ವಿಶ್ವಸ್ಯಮಿತ್ರಂ ಎಂಬುದಾಗಿ ಸಂಬೋಧಿಸಿರುತ್ತಾರೆ.

ವಿಶ್ವಾಮಿತ್ರರು ಅಯೋಧ್ಯಾ ನಗರಿಯ ಅರಮನೆಗೆ ಬರುತ್ತಾರೆ. ಸಭಾ ಮಧ್ಯದಲ್ಲಿ ದಶರಥನು ಮಂತ್ರಿಗಳಿಂದಲೂ ಕುಲಪುರೋಹಿತರಾದ ವಶಿಷ್ಟರಿಂದ ಮಂಡಿಸಿರುತ್ತಾನೆ. ವಿಶ್ವಾಮಿತ್ರರು ಬಂದ ವಾರ್ತೆ ಕೇಳಿ ರಾಜನೇ ಸ್ವಯಂ ಸರ್ವರೀತಿಯಿಂದ ಆದರದಿಂದ ಬರಮಾಡಿಕೊಳ್ಳುತ್ತಾನೆ. ಯುಕ್ತ ಆಸೀನ ಇತ್ಯಾದಿ ಆತಿಥ್ಯವೂ ನಡೆಯುತ್ತದೆ. ನಂತರ ಮಹಾರಾಜನು ಋಷಿಗಳನ್ನು ವಿನಯಪೂರ್ವಕ ಋಷಿಗಳು ಆಗಮಿಸಿದ ಕಾರಣವೇನು ಎಂದು ಕೇಳುತ್ತಾನೆ. ದಶರಥ ಮಹಾರಾಜನು ಮಹರ್ಷಿಗಳಿಗೆ ನಮಸ್ಕರಿಸಿ ವಿನಂತಿಸಿಕೊಳ್ಳುತ್ತಾನೆ ತಾವು ಬಂದ ಕಾರ್ಯವೇನು

ಅ) **''ಕಿಂಚಿತೇ ಪರಮಂ ಕಾಮಂ ಕರೋಮಿ ಕಿಮುಹರ್ಷಿತಃ।**
**ವಿಶ್ವಾಮಿತ್ರಂ ಸತಾಂಮಿತ್ರಂ ಕಾರ್ಯಸ್ಯೇವ ವಿನಿರ್ಣಃ॥''**

ವಿಶ್ವಕ್ಕೇ ಮಿತ್ರರಾದುದರಿಂದಲೇ ವಿಶ್ವಾಮಿತ್ರರೆಂಬ ಹೆಸರು ಅವರಿಗೆ ಅನ್ವರ್ಥಕವಾದ ಮುನಿಗಳು ಬಂದರು. (ಸಂಗ್ರ.ರಾಮ.ಬಾ–೪೨)

ಆ) **''ನೀತೋ ವಿಶ್ವಾಮಿತ್ರೇಣ ಮಂತ್ರಾಹೃದನುಜ ಸಹಿತಃ''** (ರಾಮಚರಿತಮಂಜರಿ). ಶ್ರೀಗುರುರಾಜರು



ಇ) **ಅಥ ವಿಶ್ವಾಮಿತ್ರೇಣ ಅನುಜಸಹಿತಃ** (ಲಕ್ಷ್ಮೀನಾರಾಯಣಾಚಾರ್ಯ ವ್ಯಾಖ್ಯಾ) **ತದಾ ವಿಶ್ವಾಮಿತ್ರಃ ರಾಮಾವತಾರಂ ಶೃತ್ವಾಂ ದಶರಥಗೃಹಂ ಪ್ರಾಪ್ತವಾನ್**

ವಿಶ್ವಾಮಿತ್ರರೇ ತಾವು ಬಂದ ಉದ್ದೇಶ ತಮ್ಮ ಕಾಮನಾ ಏನು ಎಂದು ಪ್ರಾರ್ಥಿಸುತ್ತಾನೆ. ಇದು ಕೇವಲ ಔಪಚಾರಿಕ ಮಾತು. ಶ್ರೀ ವಿಶ್ವಾಮಿತ್ರರು ಹೇಳುತ್ತಾರೆ.

**ತತ್ಸ್ರುಷ್ಟ್ವಾರಾಜಸಿಂಹಸ್ಯ, ವಾಕ್ಯಮದ್ಭುತ ವಿಸ್ತರಂ।**
**ಪ್ರಸ್ವನೋಮಾ ಮಹಾತೇಜಾ ವಿಶ್ವಾಮಿತ್ರೋ ಅಭ್ಯಭಾಷತ**

ಬಂದ ಕಾರ್ಯವೇನು ಎಂದು ನಿವೇದಿಸುತ್ತಾನೆ.

**ಕಿಂ ಚತೇ ಪರಮಂ ಕಾಮಂ ಕರೋಮಿ ಕಿಮು ಹರ್ಷಿತಃ**

———————————

**ಬ್ರೂಹಿಯತ್ ಪ್ರಾರ್ಥಿತಂ ತುಭ್ಯಂ ಕಾರ್ಯಮಾಗಮನಂ ಪ್ರತಿ**

ದಯ ಮಾಡಿ ತಿಳಿಸಿರಿ. ಆಜ್ಞಾ ಎಂದು ಮನೋರಥವನ್ನು ಪೂರ್ಣ ಮಾಡುವೆನು. ಸಂದೇಹ ಬೇಡ ಎಂದು ಯಥೋಚಿತವಾಗಿ ದಶರಥರಾಜನು ಕೌಶಿಕೆಯನ್ನು ಪ್ರಾರ್ಥಿಸುತ್ತಾನೆ. ವಿಶ್ವಾಮಿತ್ರರಿಗೆ ರಾಜನ ವಚನಗಳನ್ನು ಕೇಳಿ ಬಹಳ ಆನಂಡವಾಗುತ್ತದೆ. ರಾಜನನ್ನು ಶ್ಲಾಘನ ಮಾಡುತ್ತಾನೆ. ಕೇಳು ರಾಜೇಂದ್ರ. ನಾನು ಒಂದು ಮಹಾಯಜ್ಞವನ್ನು ಕೈಗೊಂಡಿದ್ದೇನೆ. ಅದು ಸಂಪೂರ್ಣವಾಗಬೇಕಾಗಿದೆ. ಆದರೆ

**''ತಸ್ಯ ವಿಘ್ನ ಕಥೌದ್ವೇತು ರಾಕ್ಷಸಾ ಕಾಮರೂಪಿಣೌ**
**ಮಾರೀಚಂಶ್ಚ ಸುಭಾಹುಶ್ಚ ವೀರ್ಯವಂತೌ ಸುಶೀಕ್ಷಿತೌ''**

ಅವರು ಮಾರೀಚ ಮತ್ತು ಸುಬಾಹು ಎಂಬ ಮಹಾ ಭಯಂಕರ ರಾಕ್ಷಸರು. ಯಜ್ಞ ಮಾಡಲು ಹೊರಟಾಗಲೆಲ್ಲಾ ಆ ದುರ್ಮಾರ್ಗರು ಯಜ್ಞಕುಂಡದಲ್ಲಿ ಮಾಂಸ ರಕ್ತಾದಿಗಳನ್ನು ಹಾಕುತ್ತಾರೆ. ಈ ಯಜ್ಞ ಲೋಕಕಲ್ಯಾಣಕ್ಕಾಗಿ ನಡೆಯಬೇಕು. ಅದನ್ನು ಸಂಪೂರ್ಣ ಅವಿಘ್ನವಾಗಿ ನಡೆಯಬೇಕು. ಅದಕ್ಕಾಗಿ ಹೇ ರಾಜನ್, ನನ್ನ ಕೋರಿಕೆಯನ್ನು ಮನ್ನಿಸು.

ಸಂಗ್ರಹ – ನಿರೂಪಣೆ
**ಪ್ರೊ॥ ಪಂ ॥ ಬದರೀನಾಥಾಚಾರ್ಯ ಘೂಳೀ ಎಂ.ಎ.**
ಮಾಧವ ಮಧ್ವ ಪ್ರಕಾಶನ
ಬೆಂಗಳೂರು–೫೬೦ ೦೯೮

* * * * * * *